Bruhat Bengaluru
Mahanagara Palike

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಕನ್ನಡ ದಿನಪತ್ರಿಕೆಗಳ ತುಣಕು

## 16-11-2020



# ಪರಿವಿಡಿ

1. ಪ್ರಜಾ ವಾಣಿ
2. ಕನ್ನಡ ಪ್ರಭ
3. ವಿಜಯ ಕರ್ನಾಟಕ
4. ವಿಜಯ ವಾಣಿ
5. ವಿಶ್ವ ವಾಣಿ
6. ಉದಯ ವಾಣಿ
7. ಸಂಯುಕ್ತ ಕರ್ನಾಟಕ
8. ಹೊಸ ದಿಗಂತ
9. ವಾರ್ತಾ ಭಾರತಿ
10. ಸಂಜೆ ವಾಣಿ
11. ಈ ಸಂಜೆ

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 16-11-2020 |
| --- | --- |
| Page No | 2 |


ಕೋವಿಡ್ ನಡುವೆಯೂ ಕುಗ್ಗದ ಹಬ್ಬದ ಸಡಗರ • ದೇಗುಲಗಳಲ್ಲಿ ಪೂಜೆ • ಪಟಾಕಿ ಸಿಡಿಸಿ ಸಂಭ್ರಮಿಸಿದ ಮಕ್ಕಳು

# ಸಂಕಷ್ಟ ಪರಿಹರಿಸಲು ಮಹಾಲಕ್ಷ್ಮಿಗೆ ಮೊರೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೊರೊನಾ ಕರಿನೆರಳಿನ ನಡುವೆಯೂ ನಗರದಲ್ಲಿ ದೀಪಾವಳಿಯನ್ನು ಸಡಗರದಿಂದ ಆಚರಿಸಲಾಯಿತು. ಮೊದಲಿನ ಅದ್ಧೂರಿತನ ಇರದಿದ್ದರೂ, ಸಂಭ್ರಮಕ್ಕೆ ಮಿತಿ ಇರಲಿಲ್ಲ.

ಈ ಬಾರಿ ದೀಪಾವಳಿ ಅಮಾವಾಸ್ಯೆ ಎರಡು ದಿನ (ಶನಿವಾರ ಮತ್ತು ಭಾನುವಾರ) ಬಂದಿದ್ದು, ಎರಡೂ ದಿನವೂ ಪೂಜೆ-ಪುನಸ್ಕಾರಗಳು ನಡೆದವು. ಮನೆಯ ಮುಂದೆ ರಂಗೋಲಿ ಅರಳಿದರೆ, ಬಾಗಿಲುಗಳು ತಳಿರು-ತೋರಣಗಳಿಂದ ಕಂಗೊಳಿಸಿದವು. ಹಿರಿಯರು, ಮಕ್ಕಳಾದಿಯಾಗಿ ಹೊಸ ಬಟ್ಟೆ ತೊಟ್ಟು ಸಂಭ್ರಮಿಸಿದರು.

ಮಾರುಕಟ್ಟೆಗಳಲ್ಲಿ ಬಾಳೆ ಕಂಬ, ಹೂವು-ಹಣ್ಣು, ಹಬ್ಬಕ್ಕೆ ಬೇಕಾದ ಸಾಮಗ್ರಿಗಳ ಖರೀದಿ ಜೋರಾಗಿತ್ತು. ವಾಹನಗಳ ಪೂಜೆ ಭಾನುವಾರವೂ ಮುಂದುವರಿದಿತ್ತು.

ಪಟಾಕಿ ನಿಷೇಧಿಸಿದ್ದರಿಂದ ಬಹುತೇಕರು ಹಸಿರು ಪಟಾಕಿ ಅಥವಾ ಸುರ್ ಸುರ್ ಬತ್ತಿ, ಹೂಕುಂಡಗಳನ್ನು ಹಚ್ಚಿ ಸಂಭ್ರಮಿಸಿದರು.

**ದೀಪಗಳ ಅಲಂಕಾರ:** ಸಂಜೆಯಾಗುತ್ತಿದ್ದಂತೆ ಮನೆಯ ಒಳಗೆ ಮತ್ತು ಹೊರಗೆ ದೀಪಗಳು ಬೆಳಗಿದವು. ವಿದ್ಯುತ್‌ದೀಪಗಳಿದ್ದ ಆಕಾಶಬುಟ್ಟಿಗಳು ಮನೆಗಳ ಅಂದವನ್ನು ಹೆಚ್ಚಿಸಿದ್ದವು. ಕೆಲವರು ನಡುಮನೆ, ದೇವರ ಮನೆಯ ಮುಂದೆ ಹೂವಿನ ರಂಗೋಲಿ ಹಾಕಿ ದೀಪಗಳನ್ನಿಟ್ಟು ಅಲಂಕರಿಸಿದ್ದರು.

ಹಲವು ಕಚೇರಿಗಳು, ಮಾರಾಟ ಮಳಿಗೆಗಳನ್ನೂ ಬಗೆ ಬಗೆಯ ವಿನ್ಯಾಸದ ನಾನಾ ಬಣ್ಣದ ಆಕಾಶಬುಟ್ಟಿಗಳಿಂದ ಅಲಂಕರಿಸಲಾಗಿತ್ತು. ಚಿನ್ನಾಭರಣ, ಬಟ್ಟೆ ಮಳಿಗೆಗಳು, ಮಾಲ್‌ಗಳು ಕೂಡ ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿದ್ದವು.

ಮಹಾಲಕ್ಷ್ಮಿ ದೇವಾಲಯ, ದುರ್ಗಾ ಪರಮೇಶ್ವರಿ ದೇವಾಲಯ, ಇಸ್ಕಾನ್ ನ ಕೃಷ್ಣ ದೇಗುಲ, ಕೋಟೆ ವೆಂಕಟೇಶ್ವರ ದೇವಾಲಯ, ರಾಜರಾಜೇಶ್ವರಿ ದೇವಾಲಯ, ಸರ್ಕಲ್ ಮಾರಮ್ಮ, ತಿರುಪತಿ ತಿರುಮಲ ದೇವಸ್ಥಾನ, ಕಾಡುಮಲ್ಲೇಶ್ವರ ಮತ್ತಿತರ ದೇವಾಲಯಗಳಲ್ಲಿ ವಿಶೇಷ ಪೂಜೆ ನಡೆಯಿತು. ದೇವಾಲಯಗಳ ಒಳ, ಹೊರಾಂಗಣ ಮತ್ತು ಗೋಪುರಗಳನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದೆ. ಸೋಮವಾರದಿಂದ ಕಾರ್ತಿಕ ಮಾಸ ಆರಂಭವಾಗುವುದರಿಂದ ಶಿವನ ದೇವಾಲಯಗಳಲ್ಲಿ ವಿಶೇಷ ದೀಪೋತ್ಸವ ಹಾಗೂ ಆಚರಣೆಗಳು ಭಕ್ತರನ್ನು ಸೆಳೆಯಲಿವೆ.

ಜಯನಗರದ ಕೆಲವು ರಸ್ತೆಗಳಲ್ಲಿ ಪೌರಕಾರ್ಮಿಕರಿಗೆ ರಂಗೋಲಿ ಸ್ಪರ್ಧೆ ಏರ್ಪಡಿಸಲಾಗಿತ್ತು. ಜತೆಗೆ ಅವರಿಗೆ ಸಿಹಿ ಕೂಡ ವಿತರಿಸಲಾಯಿತು.

**ಶುಭಾಶಯ ವಿನಿಮಯ:** ಕೋವಿಡ್ ಕಾರಣದಿಂದ ಹೆಚ್ಚು ಜನ ಒಂದೆಡೆ ಸೇರಲು ಸಾಧ್ಯವಾಗದಿರುವ ಸಂದರ್ಭದಲ್ಲಿ, ಸಾಮಾಜಿಕ ಮಾಧ್ಯಮಗಳಲ್ಲಿಯೇ ಹೆಚ್ಚು ಜನ ಶುಭಾಶಯ ವಿನಿಮಯ ಮಾಡಿಕೊಂಡರು. ವಾಟ್ಸ್‌ಆ್ಯಪ್, ಫೇಸ್‌ಬುಕ್, ಟ್ವಿಟರ್‌ಗಳಲ್ಲಿ ಹಬ್ಬದ ಸಂದೇಶ ಸಾರುವ ಸಾಲುಗಳು, ಚಿತ್ರಗಳನ್ನು ಹಂಚಿಕೊಂಡರು. ದೇಶ ಮತ್ತು ರಾಜ್ಯ ಆದಷ್ಟು ಬೇಗ ಕೊರೊನಾ ಸೋಂಕು ಮುಕ್ತವಾಗಲಿ ಎಂಬ ಪ್ರಾರ್ಥನೆಯೇ ಪ್ರಮುಖವಾಗಿತ್ತು.





ನಗರದ ಕೆಂಗೇರಿ ಮಾರುತಿ ನಗರದಲ್ಲಿ ಭಾನುವಾರ ದೀಪಾವಳಿ ಸಡಗರದಲ್ಲಿದ್ದ ಕುಟುಂಬವೊಂದು ಕ್ಯಾಮೆರಾ ಕಣ್ಣಿಗೆ ಕಂಡದ್ದು ಹೀಗೆ (ಎಡಚಿತ್ರ) ಮಲ್ಲೇಶ್ವರದ ಸರ್ಕಲ್ ಮಾರಮ್ಮ ದೇವಸ್ಥಾನದ ಮುಂದೆ ವಾಹನಗಳಿಗೆ ಪೂಜೆ ಸಲ್ಲಿಸುತ್ತಿರುವ ದೃಶ್ಯ ಕಂಡುಬಂತು – ಪ್ರಜಾವಾಣಿ ಚಿತ್ರಗಳು

## ದೇಗುಲಗಳಲ್ಲಿ ವಿಶೇಷ ಪೂಜೆ

ನಗರದ ಹಲವು ದೇವಾಲಯಗಳಲ್ಲಿ ವಿಶೇಷ ಪೂಜೆ ಹಾಗೂ ದೇವರಿಗೆ ಅಲಂಕಾರ ಏರ್ಪಡಿಸಲಾಗಿತ್ತು. ಪ್ರತಿ ವರ್ಷದಂತೆ ಈ ಬಾರಿಯೂ ನೋಮುವ ಸಂಪ್ರದಾಯವುಳ್ಳವರಿಗಾಗಿ ಕೆಲವು ದೇಗುಗಳಲ್ಲಿ ಪ್ರತ್ಯೇಕವಾಗಿ ಗೌರಿಯನ್ನು ಪ್ರತಿಷ್ಠಾಪಿಸಲಾಗಿತ್ತು. ಸೋಮವಾರದವರೆಗೆ ದೇವಾಲಯಗಳಲ್ಲಿ ವಿಶೇಷ ಪೂಜೆ ನಡೆಯುತ್ತದೆ.

ಬನಶಂಕರಿ ದೇವಾಲಯದಲ್ಲಿ ಭಾನುವಾರ ವಿಶೇಷ ಹೋಮ, ಹವನ ನಡೆಯಿತು. ಇದೇ ವೇಳೆ ದೇವಿಯ ಮೂರ್ತಿಗೆ ಹೂವುಗಳಿಂದ ವಿಶೇಷ ಅಲಂಕಾರ ಮಾಡಲಾಗಿತ್ತು. ದೇಗುಲಗಳಲ್ಲಿ ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸಲಾಯಿತು.

## ದೀಪಾವಳಿ: ಕಾಳಿಪೂಜೆ

ಯಲಹಂಕ: ಜಕ್ಕೂರು ಗ್ರಾಮದಲ್ಲಿರುವ ಭಾರತ್ ಸೇವಾಶ್ರಮ್ ಸಂಘದ ಆಶ್ರಯದಲ್ಲಿ ದೀಪಾವಳಿ ಹಬ್ಬದ ಪ್ರಯುಕ್ತ ಕಾಳಿಪೂಜಾ ಸಮಾರಂಭ ಏರ್ಪಡಿಸಲಾಗಿತ್ತು.

ದೇವಿಗೆ ವಿವಿಧ ರೀತಿಯ ಪೂಜಾಕೈಂಕರ್ಯಗಳು, ಆರತಿ, ಹೋಮ-ಹವನ ಮತ್ತಿತರ ಸೇವೆಗಳನ್ನು ನೆರವೇರಿಸಲಾಯಿತು.

ಸಂಘದ ಜಕ್ಕೂರು ಶಾಖೆಯ ಮುಖ್ಯಸ್ಥ ಶಿವಪ್ರೇಮಾನಂದ ಸ್ವಾಮೀಜಿ ಮಾತನಾಡಿ, 'ಕಳೆದ 14 ವರ್ಷಗಳಿಂದ ಕಾಳಿಪೂಜಾ ಸಮಾರಂಭವನ್ನು ಆಯೋಜಿಸಲಾಗುತ್ತಿದ್ದು, ಪ್ರತಿವರ್ಷ ಬೆಂಗಳೂರು ಹಾಗೂ ಇತರೆ ಜಿಲ್ಲೆಗಳಲ್ಲಿ ನೆಲೆಸಿರುವ ಬೆಂಗಾಲಿ ಸಮುದಾಯದ ಸಾವಿರಾರು ಜನರು ಪಾಲ್ಗೊಳ್ಳುತ್ತಿದ್ದರು. ಆದರೆ, ಈ ಸಲ ಕೋವಿಡ್-19ರ ಕಾರಣ ಕಡಿಮೆ ಜನರು ಭಾಗವಹಿಸಿದ್ದು, ಕೋವಿಡ್ ನಿಯಮಗಳನ್ನು ಪಾಲಿಸುವ ಮೂಲಕ ಸರಳವಾಗಿ ಈ ಕಾರ್ಯಕ್ರಮ ಆಚರಿಸಲಾಗಿದೆ' ಎಂದು ತಿಳಿಸಿದರು. ಇದೇ ವೇಳೆ 500 ಬಡಜನರಿಗೆ ಟೀ-ಶರ್ಟ್, ಪ್ಯಾಂಟ್ ಹಾಗೂ ಬೆಡ್ ಶೀಟ್ ವಿತರಿಸಲಾಯಿತು.



ಭಾರತ್ ಸೇವಾಶ್ರಮ್ ಸಂಘದಲ್ಲಿ ಕಾಳಿಪೂಜೆ ನಡೆಯಿತು

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 16-11-2020 |
|---|---|
| Page No | 2 |


# ಹಲವೆಡೆ ಜೋರು ಮಳೆ ಹೊಳೆಯಂತೆ ಹರಿದ ನೀರು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಹಲವೆಡೆ ಭಾನುವಾರ ಸಂಜೆ ಜೋರು ಮಳೆಯಾಗಿದ್ದು, ಹಲವು ರಸ್ತೆಗಳಲ್ಲಿ ಹೊಳೆಯಂತೆ ನೀರು ಹರಿಯಿತು.

ನಗರದಲ್ಲಿ ಕೆಲ ದಿನಗಳಿಂದ ಮೋಡ ಕವಿದ ವಾತಾವರಣ ಇದೆ. ಭಾನುವಾರವೂ ಬೆಳಿಗ್ಗೆಯಿಂದ ಹಲವೆಡೆ ಮೋಡ ಕವಿದ ವಾತಾವರಣವಿತ್ತು. ಮಧ್ಯಾಹ್ನ ವೇಳೆ ಕೆಲವೆಡೆ ಮಾತ್ರ ಜಿಟಿ ಜಿಟಿ ಮಳೆಯಾಗಿತ್ತು. ಸಂಜೆ ವೇಳೆ ಮಳೆ ಜೋರಾಗಿ ಸುರಿಯಿತು.

ಆರ್.ಟಿ.ನಗರ, ಸಂಜಯನಗರ, ಹೆಬ್ಬಾಳ, ಅಮೃತಹಳ್ಳಿ, ಸದಾಶಿವನಗರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಪ್ರಮಾಣ ಹೆಚ್ಚಿತ್ತು. ಪೀಣ್ಯ, ಯಶವಂತಪುರ, ಮಲ್ಲೇಶ್ವರ, ಬಸವೇಶ್ವರನಗರ, ರಾಜಾಜಿನಗರ, ವಿಜಯನಗರ, ಯಶವಂತಪುರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲೂ ಮಳೆ ಆಯಿತು.



ನಗರದ ಮೈಸೂರು ರಸ್ತೆಯಲ್ಲಿ ಸುರಿವ ಮಳೆಯಲ್ಲಿಯೇ ಕೊಡೆ ಹಿಡಿದು ಸಾಗಿದ ವಾಹನ ಸವಾರರು — ಪ್ರಜಾವಾಣಿ ಚಿತ್ರ

'ಶುಕ್ರವಾರ ರಾತ್ರಿಯೂ ನಗರದಲ್ಲಿ ಮಳೆ ಆಗಿತ್ತು. ಯಾವುದೇ ಹಾನಿ ಆಗಿರಲಿಲ್ಲ. ಭಾನುವಾರವೂ ಸಂಜೆ ಮಳೆ ಜೋರಾಗಿ ಸುರಿದಿದ್ದು, ರಸ್ತೆಯಲ್ಲಿ ಹೆಚ್ಚು ನೀರು ಹರಿದಿದೆ. ಈ ಬಗ್ಗೆ ದೂರುಗಳು ಹೆಚ್ಚಾಗಿ ಬಂದಿದ್ದು, ಸಿಬ್ಬಂದಿ ತ್ವರಿತವಾಗಿ ಸ್ಪಂದಿಸಿದ್ದಾರೆ. ಮರ ಬಿದ್ದ ಹಾಗೂ ಮಳೆಯಿಂದ ಹಾನಿಯಾದ ಬಗ್ಗೆ ಯಾವುದೇ ದೂರುಗಳು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಸುದ್ದಿ ಮಾಧ್ಯಮ

| Date | 16-11-2020 |
|---|---|
| Page No | 2 |



# ನಾಲ್ಕು ತಿಂಗಳಲ್ಲೇ ಕನಿಷ್ಠ ಪ್ರಕರಣ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯದಲ್ಲಿ ಭಾನುವಾರ 1,565 ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಕಳೆದ ನಾಲ್ಕು ತಿಂಗಳಲ್ಲಿಯೇ 24 ಗಂಟೆಗಳ ಅವಧಿಯಲ್ಲಿ ವರದಿಯಾದ ಸೋಂಕಿತರ ಕನಿಷ್ಠ ಸಂಖ್ಯೆ ಇದಾಗಿದೆ.

ಜುಲೈ ಮೊದಲ ವಾರದಲ್ಲಿ ದಿನಕ್ಕೆ ಸುಮಾರು 1,500 ಆಸು–ಪಾಸು ಪ್ರಕರಣಗಳು ವರದಿಯಾಗಿದ್ದವು. ಅದಾದ ನಂತರ ಇದೇ ಮೊದಲ ಬಾರಿಗೆ ಪ್ರಕರಣಗಳ ಸಂಖ್ಯೆ ಇಷ್ಟು ಕಡಿಮೆಯಾಗಿದೆ. ಸೋಂಕಿತರಿಗಿಂತ ಗುಣಮುಖರ ಸಂಖ್ಯೆ ಸುಮಾರು ಒಂದು ಸಾವಿರ ಹೆಚ್ಚಾಗಿದ್ದು, 2,363 ಜನ ಕೋವಿಡ್‌ನಿಂದ ಮುಕ್ತರಾಗಿ ಮನೆಗೆ ತೆರಳಿದ್ದಾರೆ. ಆ ಮೂಲಕ ಗುಣಮುಖರಾದವರ ಸಂಖ್ಯೆ 8,22,953ಕ್ಕೆ ಏರಿದ್ದರೆ, ಒಟ್ಟಾರೆ ಸೋಂಕಿತರ ಸಂಖ್ಯೆ 8,61,647ಕ್ಕೆ ಏರಿದೆ. ಈವರೆಗೆ ಒಟ್ಟು 11,529 ಜನ ಕೋವಿಡ್‌ನಿಂದ ಮೃತಪಟ್ಟಿದ್ದಾರೆ.



ಈ ತಿಂಗಳ ಮೊದಲೆರಡು ವಾರ ಸೋಂಕಿತರ ಸಂಖ್ಯೆ ಬಹುತೇಕ ದಿನಗಳು 10 ಸಾವಿರಕ್ಕಿಂತ ಹೆಚ್ಚಾಗಿತ್ತು. ಕಡೆಯ ಎರಡು ವಾರಗಳಲ್ಲಿ ಇಳಿಮುಖ ಕಂಡಿದ್ದು, ಈಗ ಒಂದೂವರೆ ಸಾವಿರಕ್ಕೆ ತಲುಪಿದೆ. ನ.14ರಂದು ಸೋಂಕು ಪ್ರಕರಣಗಳ ಶೇ ಪ್ರಮಾಣ 1.57ರಷ್ಟಿದ್ದರೆ, ಮೃತಪಟ್ಟವರ ಪ್ರಮಾಣ ಶೇ 1.34ರಷ್ಟಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 27,146ಕ್ಕೆ ಇಳಿದಿದೆ. ಹೊಸದಾಗಿ 17,075 ಜನರಿಗೆ ರ‍್ಯಾಪಿಡ್ ಆ್ಯಂಟಿಜೆನ್ ಪರೀಕ್ಷೆ ಮತ್ತು 82,531 ಜನರಿಗೆ ಆರ್‌ಟಿ ಪಿಸಿಆರ್ ಪರೀಕ್ಷೆ ಮಾಡಲಾಗಿದೆ. ಈವರೆಗೆ ಒಟ್ಟು 94,92,080 ಜನ ಕೋವಿಡ್ ಪರೀಕ್ಷೆಗೆ ಒಳಗಾಗಿದ್ದಾರೆ.

ಬೆಂಗಳೂರಿನಲ್ಲಿ ಹೊಸದಾಗಿ 840 ಜನರಲ್ಲಿ ಸೋಂಕು ದೃಢಪಟ್ಟಿದ್ದರೆ, 6 ಮಂದಿ ಸಾವಿಗೀಡಾವುದರೊಂದಿಗೆ ರಾಜಧಾನಿಯಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ 4 ಸಾವಿರಕ್ಕೆ ಏರಿದೆ.



## 50 ಸಾವಿರಕ್ಕೂ ಕಡಿಮೆ ಪ್ರಕರಣ

**ನವದೆಹಲಿ (ಪಿಟಿಐ):** ಭಾರತದಲ್ಲಿ ಭಾನುವಾರ ಸತತ ಎಂಟನೇ ದಿನದಂದು 50 ಸಾವಿರಕ್ಕೂ ಕಡಿಮೆ ಕೋವಿಡ್ ಪ್ರಕರಣಗಳು ವರದಿಯಾಗಿವೆ. ಕಳೆದ 24 ಗಂಟೆಗಳಲ್ಲಿ ಒಟ್ಟು 41,100 ಪ್ರಕರಣಗಳು ವರದಿಯಾಗಿವೆ.

ಇದೇ ಅವಧಿಯಲ್ಲಿ 42,156 ಜನರು ಚೇತರಿಸಿಕೊಂಡಿದ್ದಾರೆ. ಯುರೋಪ್, ಅಮೆರಿಕದಂಥ ರಾಷ್ಟ್ರಗಳಲ್ಲಿ ಪ್ರಕರಣಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಈ ಬೆಳವಣಿಗೆ ಗಮನಾರ್ಹವಾದುದು ಎಂದು ಆರೋಗ್ಯ ಸಚಿವಾಲಯವು ಪ್ರತಿಪಾದಿಸಿದೆ. ದೇಶದಲ್ಲಿ ಸದ್ಯ 4,79,216 ಸಕ್ರಿಯ ಪ್ರಕರಣಗಳಿದ್ದು, ಒಟ್ಟು ಪ್ರಕರಣಗಳಿಗೆ ಹೋಲಿಸಿದರೆ ಈ ಪ್ರಮಾಣ ಶೇ 5.44ರಷ್ಟಾಗಿದೆ. ಕಳೆದ ಬಾರಿ ನ. 7ರಂದು ಹೊಸ ಪ್ರಕರಣಗಳ ಸಂಖ್ಯೆ 50 ಸಾವಿರದ ಗಡಿ ದಾಟಿತ್ತು. 15 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪ್ರತಿ 10 ಲಕ್ಷಕ್ಕೆ ಪ್ರಕರಣಗಳ ಸಂಖ್ಯೆ ದೇಶದ ಸರಾಸರಿಗಿಂತಲೂ (6,387) ಕಡಿಮೆ ಇದೆ. ಒಟ್ಟಾರೆ ಚೇತರಿಕೆಯ ಪ್ರಮಾಣವು 93.09ರಷ್ಟಿದೆ. ಒಟ್ಟಾರೆ 82,05,728 ಜನರು ಗುಣಮುಖರಾಗಿದ್ದು, ಇದು ಸಕ್ರಿಯ ಪ್ರಕರಣಗಳ ಸಂಖ್ಯೆಗಿಂತಲೂ (77,26,512) ಹೆಚ್ಚಾಗಿದೆ.

ಕನ್ನಡಪ್ರಭ

| Date | 16-11-2020 |
| --- | --- |
| Page No | 1 |


# ರಾಜ್ಯದಲ್ಲಿ ನಿನ್ನೆ 1565 ಕೇಸ್: 5 ತಿಂಗಳಲ್ಲೇ ಅತ್ಯಂತ ಕನಿಷ್ಠ

## ಜುಲೈ ನಂತರ ಮೊದಲ ಬಾರಿಗೆ ನಿತ್ಯದ ಪ್ರಕರಣ 1500ರ ಆಸುಪಾಸಿಗೆ 19 ಜಿಲ್ಲೆಗಳಲ್ಲಿ ಒಂದೂ ಸಾವಿಲ್ಲ | ಸಕ್ರಿಯ ಸೋಂಕಿತರು 27000ಕ್ಕಿಳಿಕೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯದಲ್ಲಿ 5 ತಿಂಗಳ ನಂತರ ಇದೇ ಮೊದಲ ಬಾರಿಗೆ ಭಾನುವಾರ ಅತಿ ಕಡಿಮೆ ಕೊರೋನಾ ಸೋಂಕು ಪ್ರಕರಣಗಳು ದೃಢಪಟ್ಟಿದ್ದು, 1565 ಪ್ರಕರಣಗಳು ವರದಿಯಾಗಿವೆ.




ಇದೇ ವೇಳೆ 2363 ಜನರು ಗುಣಮುಖರಾಗಿದ್ದು, ಸಕ್ರಿಯ ಸೋಂಕು ಪ್ರಕರಣಗಳ ಸಂಖ್ಯೆ 27,146ಕ್ಕೆಕುಸಿದಿದೆ. ಇದು ರಾಜ್ಯದಲ್ಲಿ ಕೊರೋನಾ ತಹಬದಿಗೆ ಬರುತ್ತಿರುವುದರ ಸಂಕೇತ ಎಂದೇ ವ್ಯಾಖ್ಯಾನಿಸಲಾಗುತ್ತಿದೆ.

ಇದೇ ವೇಳೆ, 21 ಸೋಂಕಿತರ ಸಾವಿನೊಂದಿಗೆ ಮೃತರ ಸಂಖ್ಯೆ 11,529ಕ್ಕೆ ಹೆಚ್ಚಿದೆ.

ಈ ಹಿಂದೆ ಜುಲೈ 1ರಂದು 1,272 ಮತ್ತು ಜುಲೈ 2ರಂದು 1,562 ಪ್ರಕರಣಗಳು ದಾಖಲಾಗಿದ್ದವು. ಆ ನಂತರ ಐದು ತಿಂಗಳ ಬಳಿಕ ಇದೀಗ ಅತ್ಯಂತ ಕನಿಷ್ಠ ಎನ್ನಬಹುದಾದ 1565 ಹೊಸ ಪ್ರಕರಣ ಪತ್ತೆಯಾಗಿವೆ.

**ಪಾಸಿಟಿವಿಟಿ ಕೇವಲ ಶೇ.1.57:** ಭಾನುವಾರ ಒಟ್ಟಾರೆ 99,606 ಟೆಸ್ಟ್ ನಡೆಸಿದ್ದು ಅವುಗಳಲ್ಲಿ 82,531 (ಶೇ.82.85) ಆರ್‌ಟಿಪಿಸಿಆರ್ ಟೆಸ್ಟ್ ಆಗಿದೆ. ಉಳಿದ 17,075 ರ್ಯಾಪಿಡ್ ಆ್ಯಂಟಿಜನ್ ಟೆಸ್ಟ್ ಮಾಡಲಾಗಿದೆ.

↘ 9

## ಅಮೆರಿಕದಲ್ಲಿ ಮತ್ತೆ ಲಾಕ್‌ಡೌನ್ ಆತಂಕ

**ವಾಷಿಂಗ್ಟನ್:** ನಿತ್ಯ 1.25 ಲಕ್ಷಕ್ಕೂ ಹೆಚ್ಚು ಕೊರೋನಾ ಸೋಂಕು ಪ್ರಕರಣಗಳು ದಾಖಲಾಗುತ್ತಿರುವ ಅಮೆರಿಕದಲ್ಲಿ ಮತ್ತೆ ಲಾಕ್‌ಡೌನ್ ಛಾಯೆ ಆವರಿಸಿದೆ. 'ಹೀಗೇ ಮುಂದುವರಿದರೆ ಅಮೆರಿಕ 'ಕೋವಿಡ್ ನರಕ' ಆದೀತು. 4-6 ವಾರ ಲಾಕ್‌ಡೌನ್ ಅಗತ್ಯ' ಎಂದು ಭಾವಿ ಅಧ್ಯಕ್ಷ ಜೋ ಬೈಡೆನ್ ಸಲಹಾ ಮಂಡಳಿ ಸದಸ್ಯರೊಬ್ಬರು ಅಭಿಪ್ರಾಯ ಪಟ್ಟಿದ್ದಾರೆ. ಬೈಡೆನ್‌ರ ಕೊರೋನಾ ಸಲಹಾ ಸಮಿತಿ ಸದಸ್ಯ, ಮಂಡ್ಯ ಮೂಲದ ಡಾ| ವಿವೇಕ್ ಹಲ್ಲೇಗೆರೆ ಅವರೂ ಭಾಗಶಃ ಲಾಕ್‌ಡೌನ್ ಬಗ್ಗೆ ಒಲವು ತೋರಿದ್ದಾರೆ.

ವಿವರ ↘ 7

## ಸತತ 8ನೇ ದಿನ 50 ಸಾವಿರಕ್ಕಿಂತ ಕಡಿಮೆ ಕೇಸ್

**ನವದೆಹಲಿ:** ಅತ್ತ ಯುರೋಪ್, ಅಮೆರಿಕದಲ್ಲಿ ನಿತ್ಯ ಸೋಂಕು ಆತಂಕಕಾರಿಯಾಗಿ ಏರಿಕೆಯಾಗುತ್ತಿದ್ದರೆ, ಭಾರತದಲ್ಲಿ 8 ದಿನಗಳಿಂದ ನಿತ್ಯ 50,000ಕ್ಕಿಂತ ಕಡಿಮೆ ಪ್ರಕರಣಗಳು ಪತ್ತೆಯಾಗುತ್ತಿವೆ. ದೇಶದಲ್ಲಿ ಭಾನುವಾರ 41100 ಹೊಸ ಪ್ರಕರಣಗಳು ದೃಢಪಟ್ಟಿವೆ.

ವಿವರ ↘ 7

# ಪಟಾಕಿ ಗಾಯ ಶೇ.85 ಕಮ್ಮಿ!

## ಕಳೆದ ಸಲ 88 ಕೇಸ್, ಈ ಸಲ 11 ಪಟಾಕಿ ಜೊತೆ ಹಾನಿಯೂ ಇಳಿಕೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಸುರಕ್ಷಿತ ದೀಪಾವಳಿ

ಕೊರೋನಾ ಭೀತಿ, ವಿಷ ಪಟಾಕಿ ನಿಷೇಧ ಹಿನ್ನೆಲೆಯಲ್ಲಿ ಪಟಾಕಿ ಬಗ್ಗೆ ಜನರು ನಿರಾಸಕ್ತಿ ತೋರಿದ್ದರಿಂದ ಗುಣಾತ್ಮಕ ಫಲಿತಾಂಶವೊಂದು ಲಭ್ಯವಾಗಿದೆ. ಈ ಸಲ ಕಣ್ಣಿನ ಹಾನಿ ಸೇರಿ ಗಂಭೀರ ಗಾಯ ಪ್ರಮಾಣ ಶೇ.85 ಕಡಿಮೆಯಾಗಿವೆ. ಕಳೆದ ವರ್ಷ ರಾಜ್ಯಾದ್ಯಂತ 88 ಪ್ರಕರಣ ದಾಖಲಾಗಿದ್ದರೆ, ಈ ಬಾರಿ 11 ಪ್ರಕರಣಗಳಷ್ಟೇ ದಾಖಲಾಗಿವೆ. ಈ ಪೈಕಿ 10 ಬೆಂಗಳೂರಲ್ಲಿ, ಇನ್ನೊಂದು ಕೋಲಾರದಲ್ಲಿ ವರದಿಯಾಗಿದೆ. ಎಲ್ಲವೂ ಶೀಘ್ರ ವಾಸಿಯಾಗುವ ಗಾಯಗಳಾಗಿವೆ. ರಾಜ್ಯದ ಉಳಿದ ಯಾವ ಭಾಗದಿಂದಲೂ ಯಾವುದೇ ಅನಾಹುತವಾಗಿರುವ ಬಗ್ಗೆ ವರದಿಯಾಗಿಲ್ಲ. ಈ ಬಾರಿ ಸರ್ಕಾರ ಹಸಿರು ಪಟಾಕಿಗಳಿಗಷ್ಟೇ ಅನುಮತಿ ನೀಡಿರುವುದರಿಂದ ಅಪಾಯಕಾರಿ ಪಟಾಕಿಗಳಿಂದಾಗಿ ಆಗುತ್ತಿದ್ದ ಗಂಭೀರ ಅನಾಹುತಗಳಿಗೆ ಬ್ರೇಕ್ ಬಿದ್ದಿದೆ.

↘ 9

ಕನ್ನಡಪ್ರಭ

| Date | 16-11-2020 |
|---|---|
| Page No | 2 |



# ಪೌರ ಕಾರ್ಮಿಕರ ಸೇವೆ ಶ್ಲಾಘನೀಯ: ಮುನಿರಾಜು

ಪೀಣ್ಯ ದಾಸರಹಳ್ಳಿ: ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಸ್ವಚ್ಛತೆಯ ಕನಸಿಗೆ ಹೊಸ ಪರಿಕಲ್ಪನೆ ನೀಡಿದ್ದು ಪ್ರಧಾನಿ ನರೇಂದ್ರ ಮೋದಿ ಅವರ ಸ್ವಚ್ಛ ಭಾರತ ಅಭಿಯಾನ ಎಂದು ಮಾಜಿ ಶಾಸಕ ಎಸ್.ಮುನಿರಾಜು ತಿಳಿಸಿದರು. ಪೀಣ್ಯ ದಾಸರಹಳ್ಳಿಯ ಎಂಇಐ ಕ್ರೀಡಾಂಗಣದಲ್ಲಿ ಬಯೋಕಾನ್ ಸಂಸ್ಥೆಯು ಬಿ.ಪ್ಯಾಕ್ ಸಹಯೋಗದೊಂದಿಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪೌರ ಕಾರ್ಮಿಕರಿಗೆ ಸಿಹಿ ವಿತರಿಸಿದ ಅವರು, ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ಪೌರ ಕಾರ್ಮಿಕರು ಸಾಕಷ್ಟು ಶ್ರಮ ವಹಿಸಿದ್ದಾರೆ. ಕೊರೋನಾ ಭೀತಿ ನಡುವೆಯೂ ತ್ಯಾಜ್ಯ ವಿಲೇವಾರಿ ಮಾಡುವ ಮೂಲಕ ಸಮಾಜದ ಸ್ವಚ್ಛತೆ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಇವರು ನಿಜವಾದ ಕೊರೋನಾ ವಾರಿಯರ್‌ಗಳು ಎಂದು ಕೊಂಡಾಡಿದರು. ಇದೇ ವೇಳೆ ಪೀಣ್ಯ ದಾಸರಹಳ್ಳಿ ಕ್ಷೇತ್ರ ವ್ಯಾಪ್ತಿಯಲ್ಲಿ ಪೌರ ಕಾರ್ಮಿಕರಿಗೆ 5000ಕ್ಕೂ ಅಧಿಕ ಸಿಹಿ ತಿಂಡಿಗಳ ಬಾಕ್ಸ್ ವಿತರಿಸಲಾಯಿತು.

ಕನ್ನಡಪ್ರಭ

| Date | 16-11-2020 |
| --- | --- |
| Page No | 2 |


# ಪಟಾಕಿ ಅನಾಹುತ ಶೇ.60ರಷ್ಟು ಕುಸಿತ

## ಕಳೆದ ವರ್ಷ ಮೊದಲ ದಿನವೇ 25 ಜನರಿಗೆ ಹಾನಿ | ಈ ವರ್ಷ ಮಿಂಟೋ ಸೇರಿ 3 ಆಸ್ಪತ್ರೆಗಳಲ್ಲಿ 10 ಪ್ರಕರಣ ದಾಖಲು

## ಕಣ್ಣುಗುಡ್ಡೆಗೆ ಸಣ್ಣ ಗಾಯ, ಕಣ್ಣಿನ ರೆಪ್ಪೆ ಸುಟ್ಟ ಸಣ್ಣ ಪ್ರಕರಣಗಳೇ ಹೆಚ್ಚು | ಶಾಶ್ವತ ಅಂಧತ್ವದ ಪ್ರಕರಣಗಳು ದಾಖಲಿಲ್ಲ





ಪಟಾಕಿಯಿಂದ ಗಾಯಗೊಂಡ ಬಾಲಕನೊಬ್ಬನ ಕಣ್ಣನ್ನು ಮಿಂಟೋ ಆಸ್ಪತ್ರೆಯಲ್ಲಿ ಪರೀಕ್ಷೆ ಮಾಡಿ, ಆತನಿಗೆ ಚಿಕಿತ್ಸೆ ನೀಡಲಾಯಿತು.



ಪಟಾಕಿ ಹಚ್ಚಿ ಸಂಭ್ರಮಿಸಿದ ನಗರದ ಮಂದಿ.

• ಕನ್ನಡಪ್ರಭ ವಾರ್ತೆ ಬೆಂಗಳೂರು

[illegible]

**ಮೊದಲ ದಿನ ಯಾವುದೇ ಕೇಸಿಲ್ಲ:** [illegible]

[illegible]

# ಕಳೆದ ವರ್ಷಕ್ಕಿಂತ ಈ ಬಾರಿ ಪಟಾಕಿ ಮಾಲಿನ್ಯ 20% ಕಮ್ಮಿ

## ಹಸಿರು ಪಟಾಕಿಯಿಂದಾಗಿ ಈ ವರ್ಷ ಮಾಲಿನ್ಯ ಕಡಿಮೆ ವಾಯುಮಾಲಿನ್ಯ ಪ್ರಮಾಣ ಶೇ.10ರಷ್ಟು ಮಾತ್ರ ಏರಿಕೆ

• ಕನ್ನಡಪ್ರಭ ವಾರ್ತೆ ಬೆಂಗಳೂರು

[illegible]

• ಕಳೆದ ವರ್ಷ 30ರಷ್ಟು ಮಾಲಿನ್ಯ ಹೆಚ್ಚಳ, ಈ ವರ್ಷ 102 ದಾಟದ ವಾಯು ಗುಣಮಟ್ಟ ಸೂಚ್ಯಂಕ

**10 ಕಡೆ ಮಾಲಿನ್ಯ ಮಾಪನ:** [illegible]

# ದೇಗುಲಗಳಲ್ಲಿ ವಿಶೇಷ ಪೂಜೆ: ಕೊರೋನಾ ನಿಯಮ ಗಾಳಿಗೆ

## ಕುಟುಂಬ ಸಮೇತ ಆಗಮಿಸಿ ಪೂಜೆ ಸಲ್ಲಿಕೆ

• ಕನ್ನಡಪ್ರಭ ವಾರ್ತೆ ಬೆಂಗಳೂರು

[illegible]

• ಹಲವೆಡೆ ಮಾಸ್ಕ್ ಧರಿಸದೆ, ಸಾಮಾಜಿಕ ಅಂತರ ಮರೆತು ಗುಂಪುಗೂಡಿದ ಭಕ್ತ ಸಮೂಹ

[illegible]

ಕನ್ನಡಪ್ರಭ

| Date | 16-11-2020 |
| --- | --- |
| Page No | 2 |


# ಮಾರುಕಟ್ಟೆಗಳಲ್ಲಿ ಜನಜಾತ್ರೆ: ಮಾರ್ಷಲ್‌ಗಳು ನಾಪತ್ತೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೋವಿಡ್-19 ಮುನ್ನೆಚ್ಚರಿಕೆಗಳನ್ನು ಬದಿಗೊತ್ತಿ ಜನರು ದೀಪಾವಳಿ ಹಬ್ಬದ ಖರೀದಿಗಾಗಿ ಮಾರುಕಟ್ಟೆಗಳಲ್ಲಿ ಮುಗಿಬೀಳುತ್ತಿದ್ದು, ಸೋಂಕು ಹರಡುವ ಆತಂಕ ಎದುರಾಗಿದೆ.



ನಗರದ ಎಲ್ಲ ಮಾರುಕಟ್ಟೆಗಳಲ್ಲಿ ವ್ಯಾಪಾರ-ವಹಿವಾಟು ರಂಗೇರಿದೆ. ಕೋಟ್ಯಂತರ ರು. ವಹಿವಾಟು ನಡೆಯುತ್ತಿದೆ. ಜನರು ಕೋವಿಡ್ ಭೀತಿ ಬದಿಗೊತ್ತಿ ನಿರ್ಭಯವಾಗಿ ಮಾರುಕಟ್ಟೆಯತ್ತ ಹೆಜ್ಜೆ ಇಡುತ್ತಿದ್ದಾರೆ. ವ್ಯಾಪಾರಿಗಳು ಹಾಗೂ ಜನರ ನಿರ್ಲಕ್ಷ್ಯದಿಂದಾಗಿ ಕೋವಿಡ್ ಸ್ಫೋಟಗೊಳ್ಳುವ ಆತಂಕವನ್ನುಂಟು ಮಾಡಿದೆ. ಮಾಸ್ಕ್ ಧರಿಸುವಿಕೆ, ಸಾಮಾಜಿಕ ಅಂತರ ಕಾಯ್ದುಕೊಳ್ಳುವ ನಿಯಮ ಉಲ್ಲಂಘಿಸುವವರನ್ನು ಪತ್ತೆ ಮಾಡಿ ದಂಡ ವಿಧಿಸಲು ನೇಮಕಗೊಂಡಿರುವ ಮಾರ್ಷಲ್‌ಗಳು ನಗರ ಕೇಂದ್ರಿತರಾಗಿದ್ದಾರೆ. ಸಾವಿರಾರು ಜನರ ಮಧ್ಯೆ ಕೋವಿಡ್ ನಿಯಮಗಳನ್ನು ಪಾಲಿಸುವಂತೆ ಬಿಸಿ ಮುಟ್ಟಿಸುವುದು ಕಷ್ಟವಾಗುತ್ತಿದೆ. ಆದರೆ, ಕೆಲವೆಡೆ ಮಾರ್ಷಲ್‌ಗಳಿಂದಲೂ ನಿರ್ಲಕ್ಷ್ಯತೆ ಎದ್ದು ಕಾಣುತ್ತಿದೆ. ಕೆ.ಆರ್.ಮಾರುಕಟ್ಟೆ, ಗಾಂಧಿಬಜಾರ್, ಮಲ್ಲೇಶ್ವರಂ, ಜಯನಗರ, ಚಿಕ್ಕಪೇಟೆ, ಅವೆನ್ಯೂ ರಸ್ತೆ, ಕಮರ್ಷಿಯಲ್ ಸ್ಟ್ರೀಟ್ ಹೀಗೆ ವಿವಿಧ ಮಾರುಕಟ್ಟೆಗಳು, ಶಾಪಿಂಗ್ ಕೇಂದ್ರಗಳು ಸೇರಿದಂತೆ ಎಲ್ಲೆಡೆ ಮುನ್ನೆಚ್ಚರಿಕೆಗಳನ್ನು ಪಾಲಿಸುತ್ತಿಲ್ಲ.

ಕನ್ನಡಪ್ರಭ

| Date | 16-11-2020 |
| --- | --- |
| Page No | 2 |

ಬೆಳಕಿನ ಹಬ್ಬ

ದೀಪಗಳಿಂದ ಕಂಗೊಳಿಸಿದ ಮನೆ, ಅಂಗಡಿಗಳು | ಲಕ್ಷ್ಮೀ ಪೂಜೆ ಸಲ್ಲಿಸಿ ಪುನೀತರಾದ ಭಕ್ತರು | ಸಂಭ್ರಮದಿಂದ ಹಬ್ಬ ಆಚರಣೆ

# ನಗರದಲ್ಲಿ ಕಳೆಗಟ್ಟಿದ ದೀಪಾವಳಿ ಹಬ್ಬದ ಸಡಗರ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೋವಿಡ್-19 ಸೋಂಕು ಇಳಿಕೆಯಾಗುತ್ತಿರುವ ಹೊತ್ತಿನಲ್ಲಿ ಬೆಳಕಿನ ಹಬ್ಬ ದೀಪಾವಳಿಯ ಸಡಗರ ಹೆಚ್ಚಿಸಿದ್ದು ಜನರು ಹೂವು, ಹಣ್ಣು, ಹಣತೆ, ಪಟಾಕಿಗಳ ಖರೀದಿಯಲ್ಲಿ ತೊಡಗಿಕೊಂಡಿದ್ದರು.

ಇದೇ ವೇಳೆ ಹೂವು, ಹಣ್ಣಿನ ಬೆಲೆ ಕುಸಿತ ಕಂಡು ಬಂದಿದೆ. ಆಕಾಶಬುಟ್ಟಿ, ಹಣತೆಗಳಿಗೂ ಹೆಚ್ಚಿನ ಬೇಡಿಕೆ ಕಂಡು ಬಂತು. ಹಬ್ಬದ ಸಿದ್ಧತೆಗಳ ಭರಾಟೆಯಲ್ಲಿ ಅನೇಕರ ಸಾಮಾಜಿಕ ಅಂತರ ಮತ್ತು ಮುಖಗವುಸು ಮರೆತಿದ್ದರು. ಜನವಸತಿ ಪ್ರದೇಶಗಳಲ್ಲಿ ಹಬ್ಬದ ವಾತಾವರಣ ಕಳೆಗಟ್ಟಿತ್ತು. ಆದರೆ, ಸದಾ ವಾಹನಗಳಿಂದ ಗಿಜಿಗುಡುತ್ತಿದ್ದ ಪ್ರಮುಖ ರಸ್ತೆಗಳು ಭಾನುವಾರದ ರಜೆ ಮತ್ತು ಹಬ್ಬದ ಹಿನ್ನೆಲೆಯಲ್ಲಿ ಹೆಚ್ಚಿನ ವಾಹನ ಸಂಚಾರವಿರದೆ ಬಿಕೋ ಎನ್ನುತ್ತಿದ್ದವು.

ಭಾನುವಾರ ಅಮಾವಾಸ್ಯೆ ಹಾಗೂ ಸೋಮವಾರ ಬಲಿಪಾಡ್ಯಮಿ ಆಚರಣೆ ಹಿನ್ನೆಲೆಯಲ್ಲಿ ಅತ್ಯಾಕರ್ಷಕ, ವೈವಿಧ್ಯಮಯ ಆಕಾಶಬುಟ್ಟಿಗಳನ್ನು, ಹೂವು, ಹಣ್ಣುಗಳನ್ನು ಖರೀದಿ ಮಾಡಲು ಮುಗಿಬಿದ್ದಿದ್ದರು. ಬೆಲೆಗೆ ತಕ್ಕಂತೆ



ಹಣತೆಗಳ ವೈವಿಧ್ಯಮಯ ವಿನ್ಯಾಸ ಇದ್ದು ಜನರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿತ್ತು.

**ಉತ್ಸಾಹ ಕಸಿದ ಮಳೆ:** ದಿನವಿಡೀ ಮೋಡ ಕವಿದ ವಾತಾವರಣವಿತ್ತು. ಹೀಗಾಗಿ ಸಂಜೆ ಮಳೆಯಾಗಬಹುದು ಎಂಬ ಸಂಶಯವೂ ಕೂಡ ಇದ್ದ ಪರಿಣಾಮ ಬೆಳಗ್ಗಿನಿಂದ ಸಂಜೆವರೆಗೂ ಹೂವು, ಹಣ್ಣು ಖರೀದಿಗೆ ಜನ ಮುಗಿಬಿದ್ದಿದ್ದರು. ಪಟಾಕಿ ಮಾರಾಟ ಮಳಿಗೆಯತ್ತ ಮಾತ್ರ ಜನ ನಿರೀಕ್ಷೆಯಂತೆ ಸುಳಿಯಲಿಲ್ಲ. ಜತೆಗೆ ಸಂಜೆ 5 ಗಂಟೆ ಸುಮಾರಿಗೆ ಆರಂಭಗೊಂಡ ಮಳೆ ರಾತ್ರಿ 7 ಗಂಟೆವರೆಗೂ ಸುರಿದ ಪರಿಣಾಮ ಪಟಾಕಿ ಸಿಡಿಸುವವರ



ಉತ್ಸಾಹಕ್ಕೆ ತಣ್ಣೀರು ಎರಚಿದಂತಾಗಿತ್ತು.

ಮಳೆ ಕಡಿಮೆಯಾದ ಬಳಿಕ ಜಯನಗರ, ಚಿಕ್ಕಪೇಟೆ, ಚಾಮರಾಜಪೇಟೆ, ಮಡಿವಾಳ, ಎಲೆಕ್ಟ್ರಾನಿಕ್ ಸಿಟಿ, ಬಾಣಸವಾಡಿ, ಜೆ.ಪಿ.ನಗರ, ಸಂಜಯನಗರ ಸೇರಿದಂತೆ ಹಲವು ಕಡೆಗಳಲ್ಲಿ ಪಟಾಕಿ ಸದ್ದು ಕೇಳಿಬಂದರೂ, ಉಳಿದೆಡೆ ಬಹುತೇಕ ಸ್ತಬ್ಧವಾಗಿತ್ತು. ಇನ್ನು ಮನೆಗಳು, ಬಹುತೇಕ ಅಂಗಡಿಗಳು ವಿದ್ಯುತ್ ದೀಪಗಳಿಂದ ಅಲಂಕರಿಸಿದ್ದರೆ, ಮನೆಗಳಲ್ಲಿ ದೀಪಗಳನ್ನು ಬೆಳಗಿದ ದೃಶ್ಯ ಕಂಡು ಬಂತು.

**ಹೂವಿನ ಬೆಲೆ ಕುಸಿತ:** ಗುರುವಾರ, ಶುಕ್ರವಾರ ಮತ್ತು ಶನಿವಾರ ಹೂವಿನ ದರದಲ್ಲಿ ಭಾರೀ ಏರಿಕೆಯಾಗಿತ್ತು. ಆದರೆ, ಭಾನುವಾರ ಹೂವಿನ ಮಾರುಕಟ್ಟೆಯಲ್ಲಿ ಅಷ್ಟಾಗಿ ಬೇಡಿಕೆ ಕಂಡು ಬರಲಿಲ್ಲ. ಇದರಿಂದಾಗಿ ಶುಕ್ರವಾರ ಕನಕಾಂಬರ, ಮಲ್ಲಿಗೆ ಮೊಗ್ಗಿಗೆ ಒಂದು ಸಾವಿರ ಕೆ.ಜಿ ಇದ್ದ ಬೆಲೆ ಭಾನುವಾರ 500ರಿಂದ 800 ರು.ಗೆ ಕುಸಿದಿತ್ತು. ಸೇವಂತಿಗೆ, ರೋಜ್, ಕಾಕಡದ ಬೆಲೆ ಕೆ.ಜಿ.ಗೆ ಕೇವಲ 80 ರು. ಇತ್ತು. ಹಣ್ಣಿನ ಬೆಲೆಯಲ್ಲಿ ಕುಸಿತ ಕಂಡುಬಂದಿದ್ದು, ಸೇಬು 100 -120 ರು., ಏಲಕ್ಕಿ ಬಾಳೆ ಹಣ್ಣು 70-80 ರು., ಪಚ್ಚಬಾಳೆ 25-30 ರು. ಇತ್ತು. ಬಹುತೇಕ ಭಾನುವಾರವೇ ಹಬ್ಬ ಮುಗಿದಿದ್ದು ಹೂವನ್ನು ಕೇಳುವವರೇ ಇರಲಿಲ್ಲ. ಆದ್ದರಿಂದ ಬೆಲೆಯಲ್ಲೂ ಇಳಿಕೆಯಾಗಿದೆ ಎಂದು ಹೂವಿನ ವರ್ತಕ ದಿವಾಕರ್ ಅವರು 'ಕನ್ನಡಪ್ರಭ'ಕ್ಕೆ ಮಾಹಿತಿ ನೀಡಿದರು.

ಕನ್ನಡಪ್ರಭ

| Date | 16-11-2020 |
| --- | --- |
| Page No | 3 |

# ನಗರದಲ್ಲೂ ಸೋಂಕು ಇಳಿಕೆ

## ನಿನ್ನೆ 840 ಕೇಸ್: 5 ತಿಂಗಳಲ್ಲೇ ಕನಿಷ್ಠ ಪ್ರಕರಣ | 4000 ದಾಟಿದ ಸಾವಿನ ಸಂಖ್ಯೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಲ್ಲಿ ಕೊರೋನಾ ಸೋಂಕು ಪ್ರಕರಣಗಳು ಭಾರೀ ಪ್ರಮಾಣದಲ್ಲಿ ಇಳಿಕೆಯಾಗುತ್ತಿದ್ದು, ಭಾನುವಾರ 840 ಹೊಸ ಪ್ರಕರಣ ವರದಿಯಾಗಿವೆ. ಜುಲೈ ಬಳಿಕ ದಿನವೊಂದರಲ್ಲಿ ದಾಖಲಾದ ಕಡಿಮೆ ಪ್ರಕರಣಗಳ ಸಂಖ್ಯೆ ಇದಾಗಿದೆ. ಜು.1ರಂದು ನಗರದಲ್ಲಿ 735 ಪ್ರಕರಣ ದಾಖಲಾಗಿತ್ತು. ಆದರೆ, ನಂತರದ ದಿನಗಳಲ್ಲಿ ಈ ಸಂಖ್ಯೆ ಹೆಚ್ಚಾಗುತ್ತಾ ಸಾಗಿ, 10000 ಗಡಿಯನ್ನು ದಾಟಿತ್ತು. ಅ.15ರ ನಂತರ ಸೋಂಕಿತರ ಸಂಖ್ಯೆ ಕಡಿಮೆ ಆಗುತ್ತಿದ್ದು, ನವೆಂಬರ್ ತಿಂಗಳ ಮೊದಲ ವಾರದಿಂದ ಸೋಂಕಿನ ಪ್ರಕರಣ ಹಾಗೂ ಸಾವಿನ ಸಂಖ್ಯೆಯಲ್ಲಿ ಭಾರೀ ಇಳಿಕೆ ಆಗುತ್ತಾ ಬಂದಿದೆ. ಭಾನುವಾರ ಪತ್ತೆಯಾದ ಹೊಸ ಪ್ರಕರಣಗಳೊಂದಿಗೆ ಈವರೆಗಿನ ಸೋಂಕಿತರ ಸಂಖ್ಯೆ 3,57,280ಕ್ಕೆ ಏರಿಕೆಯಾಗಿದೆ. 847 ಮಂದಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದು, ಒಟ್ಟು ಗುಣಮುಖರ ಸಂಖ್ಯೆ 3,35,105ಕ್ಕೆ ಏರಿಕೆಯಾಗಿದೆ. ಒಟ್ಟು ಆರು ಮಂದಿ ಮೃತಪಟ್ಟಿದ್ದು, ಈವರೆಗಿನ ಸೋಂಕಿತರ ಸಾವಿನ ಸಂಖ್ಯೆ 4,003ಕ್ಕೆ ತಲುಪಿದೆ. ಸದ್ಯ 18,171 ಸಕ್ರಿಯ ಸೋಂಕು ಪ್ರಕರಣಗಳಿವೆ. 369 ಮಂದಿಗೆ ವಿವಿಧ ಆಸ್ಪತ್ರೆಗಳ ತೀವ್ರ ನಿಗಾ ಘಟಕಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

# ಕಂಟೈನ್ಮೆಂಟ್ ಝೋನ್ ಎರಡಕ್ಕೆ ಇಳಿಕೆ

## ನಗರದಲ್ಲಿ ಕೊರೋನಾ ಸೋಂಕು ಇಳಿಮುಖ | ನಿಯಮಗಳ ಬದಲಾವಣೆ ಇವುಗಳ ಪರಿಣಾಮ ಒಂದಂಕಿಗೆ ಇಳಿದ ಕಂಟೈನ್ಮೆಂಟ್ ವಲಯಗಳ ಸಂಖ್ಯೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಒಂದು ಸಂದರ್ಭದಲ್ಲಿ 30,000ಕ್ಕಿಂತ ಹೆಚ್ಚು ಕಂಟೈನ್ಮೆಂಟ್ ವಲಯಗಳಿದ್ದ ನಗರದಲ್ಲಿ, ಕೊರೋನಾ ಸೋಂಕಿನ ಇಳಿಕೆಯಾಗುವುದರೊಂದಿಗೆ ಕಂಟೈನ್ಮೆಂಟ್ ವಲಯದ ಸಂಖ್ಯೆಈಗ ಎರಡಕ್ಕೆ ಇಳಿಕೆಯಾಗಿದೆ. ಕಂಟೈನ್ಮೆಂಟ್ ಮಾರ್ಗಸೂಚಿಯನ್ನು ಕಾಲ ಕಾಲಕ್ಕೆ ಪರಿಷ್ಕರಣೆ ಮಾಡಿದ್ದು ಸಹ ಕಂಟೈನ್ಮೆಂಟ್ ವಲಯದ ಸಂಖ್ಯೆ ಕಡಿಮೆಯಾಗಲು ಕಾರಣವಾಗಿದೆ.

ಪ್ರಸ್ತುತ ನಗರದಲ್ಲಿ ಸಕ್ರಿಯ ಸೋಂಕಿತರ ಸಂಖ್ಯೆ ಸುಮಾರು 18 ಸಾವಿರ ಇದ್ದರೂ, ಸಕ್ರಿಯ ಕಂಟೈನ್ಮೆಂಟ್ ವಲಯಗಳ ಸಂಖ್ಯೆ ಮಾತ್ರ ಹೆಚ್ಚಾಗದೇ ಕೇವಲ ಎರಡು ಮಾತ್ರ ಇದೆ. ಸಕ್ರಿಯ ಕಂಟೈನ್ಮೆಂಟ್ ವಲಯಗಳ ಸಂಖ್ಯೆ ಕಡಿಮೆ ಮಾಡಿದ ಪರಿಣಾಮ ವ್ಯಾಪಾರ ವಹಿವಾಟು, ಜನಸಂಚಾರ ಸೇರಿ ಎಲ್ಲ ಕಾರ್ಯಕ್ಕೂ ಮುಕ್ತ ಅವಕಾಶ ಲಭ್ಯವಾಗಿದೆ.

ಸೋಂಕು ಹರಡುವಿಕೆ ಪ್ರಮಾಣ ಜುಲೈ ಮತ್ತು ಆಗಸ್ಟ್‌ನಲ್ಲಿ ಭಾರೀ ಸಂಖ್ಯೆಯಲ್ಲಿ ಹೆಚ್ಚಾಗಿತ್ತು. ಆಗ ಸೋಂಕಿತ ವ್ಯಕ್ತಿ ಪತ್ತೆ ಯಾದ ಪ್ರತಿ ಮನೆಯನ್ನೂ ಕಂಟೈನ್ಮೆಂಟ್ ಪ್ರದೇಶ ಎಂದು ಗುರುತಿಸಿ ಸುತ್ತಲೂ 100 ಮೀ. ಸಂಚಾರ ನಿರ್ಬಂಧ ಹೇರಲಾಗಿತ್ತು.

ಕಂಟೈನ್ಮೆಂಟ್ ವಲಯಗಳ ಸಂಖ್ಯೆ ಬರೋಬ್ಬರಿ 36 ಸಾವಿರಕ್ಕಿಂತ ಹೆಚ್ಚಾಗಿತ್ತು. ಪ್ರತಿ ವಾರ್ಡ್‌ನಲ್ಲಿ 3–5 ರಸ್ತೆಗಳನ್ನು ಬಂದ್ ಮಾಡಲಾಗಿತ್ತು. ಈಗ ಒಂದು 100 ಮೀ. ವ್ಯಾಪ್ತಿ ಪ್ರದೇಶದಲ್ಲಿ 20ಕ್ಕಿಂತ ಅಧಿಕ ಕೊರೋನಾ ಸೋಂಕಿತ ಪ್ರಕರಣಗಳು ಕಂಡುಬಂದಲ್ಲಿ ಮಾತ್ರ ಅದನ್ನು ಕಂಟೈನ್ಮೆಂಟ್ ಎಂದು ಪರಿಗಣಿಸಲಾಗುತ್ತದೆ.



ಉಳಿದಂತೆ ಒಬ್ಬ ಅಥವಾ 20ಕ್ಕಿಂತ ಕಡಿಮೆ ಸೋಂಕಿತರು ಕಂಡುಬಂದಲ್ಲಿ ಸೋಂಕಿತರ ಮನೆಗೆ ಮಾತ್ರ ಚಿಕ್ಕ ಭಿತ್ತಿಪತ್ರ ಅಂಟಿಸಲಾಗುತ್ತದೆ.

ಸೋಂಕಿತರ ಮನೆಗಳಿಗೆ ಬಿಬಿಎಂಪಿ ಆರೋಗ್ಯ ಸಿಬ್ಬಂದಿ ಭೇಟಿ ಮಾಡಿ, ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕ ಹೊಂದಿದವರನ್ನು ಕ್ವಾರಂಟೈನ್ ಮಾಡಲಾಗುತ್ತದೆ. ಇದೀಗ ಕಂಟೈನ್ಮೆಂಟ್ ಮಾರ್ಗಸೂಚಿಯನ್ನು ಸರ್ಕಾರ ಬದಲಾವಣೆ ಮಾಡಿದ ಹಿನ್ನೆಲೆಯಲ್ಲಿ ಕಂಟೈನ್ಮೆಂಟ್ ವಲಯದ ಸಂಖ್ಯೆ ಎರಡಕ್ಕೆ ಇಳಿಕೆಯಾಗಿದೆ. ಮಾರ್ಗಸೂಚಿ ಬದಲಾವಣೆ ಬಳಿಕ ನಗರದಲ್ಲಿ 37 ಕಂಟೈನ್ಮೆಂಟ್ ವಲಯದ ಸೃಷ್ಟಿಯಾಗಿದೆ. ಇದರಲ್ಲಿ ಮಹದೇವಪುರದಲ್ಲಿ ಮಾತ್ರ ಎರಡು ಸಕ್ರಿಯ ಕಂಟೈನ್ಮೆಂಟ್ ವಲಯಗಳಿವೆ ಎಂದು ಬಿಬಿಎಂಪಿ ಮಾಹಿತಿ ನೀಡಿದೆ.

ಕನ್ನಡಪ್ರಭ

| Date | 16-11-2020 |
|---|---|
| Page No | 8 |

# ನಗರದಲ್ಲಿ ದಿನವಿಡೀ ಮೋಡ; ಸಂಜೆ ಬಳಿಕ ಮಳೆ

## ದೀಪಾವಳಿ ಸಂಭ್ರಮಕ್ಕೆ ಅಡ್ಡಿಯಾದ ಮಳೆರಾಯ | ವೈಟ್‌ಫೀಲ್ಡ್ ಭಾಗದಲ್ಲಿ ಧಾರಾಕಾರ ಮಳೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜಧಾನಿಯ ಹಲವೆಡೆ ಭಾನುವಾರ ಸಂಜೆ ಸುರಿದ ಮಳೆ ದೀಪಾವಳಿ ಸಂಭ್ರಮವನ್ನು ಕೊಂಚ ಮಂಕಾಗಿಸಿತು. ನಗರದ ಕೆಲವು ಕಡೆಗಳಲ್ಲಿ ಸುರಿದ ಮಳೆಯಿಂದ ಹಬ್ಬಕ್ಕೆಂದು ದೇವಸ್ಥಾನ, ಸಂಬಂಧಿಕರ ಮನೆಗೆ ಹೋಗಬೇಕೆಂದಿದ್ದವರು ಕಿರಿಕಿರಿ ಅನುಭವಿಸಿದರು.

ಮುಂಜಾನೆಯಿಂದಲೂ ನಗರದಲ್ಲಿ ಮೋಡ ಮುಸುಕಿದ ವಾತಾವರಣವಿದ್ದು, ಮಧ್ಯಾಹ್ನದ ವೇಳೆಗೆ ಹಲವೆಡೆ ತುಂತುರು ಮಳೆಯಾಯಿತು. ಸಂಜೆಯ ನಂತರ ಅನೇಕ ಪ್ರದೇಶಗಳಲ್ಲಿ ಸಾಧಾರಣ ಮಳೆ ಸುರಿಯಿತು. ಹೀಗಾಗಿ ಪಾದಚಾರಿಗಳು, ದ್ವಿಚಕ್ರವಾಹನ ಸವಾರರು ಮಳೆಯಿಂದ ತಪ್ಪಿಸಿಕೊಳ್ಳಲು ಸಮೀಪದ ಅಂಗಡಿ, ಮುಂಗಟ್ಟುಗಳನ್ನು ಆಶ್ರಯಿಸಿದರು. ಮೆಜೆಸ್ಟಿಕ್‌ನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಹಾಗೂ ಬಿಎಂಟಿಸಿ ಬಸ್ ನಿಲ್ದಾಣ, ಮೆಟ್ರೋ ರೈಲು ನಿಲ್ದಾಣಗಳಲ್ಲಿ ಮಳೆಯಿಂದಾಗಿ ಪ್ರಯಾಣಿಕರ ದಟ್ಟಣೆ ಹೆಚ್ಚಾಗಿತ್ತು.

ಇನ್ನು ಶಿವಾನಂದ ವೃತ್ತ, ಓಕಳಿಪುರ, ಹೆಬ್ಬಾಳ, ಕಾವೇರಿ ಜಂಕ್ಷನ್ ಸೇರಿದಂತೆ ಕೆಳ ಸೇತುವೆಗಳಲ್ಲಿ ನೀರು ನಿಂತ ಪರಿಣಾಮ ಸವಾರರು ರಸ್ತೆ ದಾಟಲು ಪರದಾಡಿದರು. ಗಾಳಿ ಆಂಜನೇಯಸ್ವಾಮಿ ದೇವಸ್ಥಾನ, ಮೈಸೂರು ರಸ್ತೆ, ಮೆಜೆಸ್ಟಿಕ್, ಶೇಷಾದ್ರಿಪುರ, ಕಾಟನ್‌ಪೇಟೆ, ಸಂಪಂಗಿರಾಮನಗರ, ನಾಗರಬಾವಿ, ಹೆಬ್ಬಾಳ, ವಿಜಯನಗರ, ಮಲ್ಲೇಶ್ವರ, ರಾಜಾಜಿನಗರ, ಕೋರಮಂಗಲ, ಮಾರುತಿ ಮಂದಿರ, ವಿದ್ಯಾಪೀಠ, ಬಸವನಗುಡಿ, ಆರ್.ಆರ್.ನಗರ, ಕೆಂಗೇರಿ ಸೇರಿದಂತೆ ಹಲವೆಡೆ ತುಂತುರು ಹಾಗೂ ಸಾಧಾರಣ ಮಳೆ ಸುರಿಯಿತು. ಸಾಮಾನ್ಯ ಮಳೆ ಬಿದ್ದಿದ್ದರಿಂದ ಹಾಗೂ ಜೋರು ಗಾಳಿ ಇಲ್ಲದ ಪರಿಣಾಮ ನಗರದಲ್ಲಿ ಯಾವುದೇ ಮರ, ವಿದ್ಯುತ್ ಕಂಬ ಮುರಿದು ಬಿದ್ದಿರುವ ಘಟನೆಗಳು ಜರುಗಿಲ್ಲ ಎಂದು ಪಾಲಿಕೆ ನಿಯಂತ್ರಣ ಕೊಠಡಿ ಸಿಬ್ಬಂದಿ ಮಾಹಿತಿ ನೀಡಿದರು.

**ಕಾಡುಗೋಡಿಯಲ್ಲಿ ಅಧಿಕ ಮಳೆ:** ಕಾಡುಗೋಡಿಯಲ್ಲಿ 19.5 ಮಿ.ಮೀ., ದೊಡ್ಡನೆಕ್ಕುಂದಿ 13.5 ಮಿ.ಮೀ., ಹಗದೂರು 13.5 ಮಿ.ಮೀ., ರಾಜಮಹಲ್ ಗುಟ್ಟಹಳ್ಳಿ 12.5 ಮಿ.ಮೀ., ಎಚ್‌ಎಎಲ್ ಏರ್‌ಪೋರ್ಟ್ 11.5 ಮಿ.ಮೀ., ಮಾರಪ್ಪನಪಾಳ್ಯ 11 ಮಿ.ಮೀ., ಕೊಟ್ಟಿಗೆಪಾಳ್ಯ 10.5 ಮಿ.ಮೀ., ಹೊರಮಾವು, ಪೀಣ್ಯ ಕೈಗಾರಿಕಾ ಪ್ರದೇಶ, ಕೋಣನ ಅಗ್ರಹಾರ, ನಂದಿನಿ ಲೇಔಟ್‌ನಲ್ಲಿ ತಲಾ 10.ಮಿ.ಮೀ., ಮಳೆಯಾಗಿದೆ. ನಗರದಲ್ಲಿ ಇನ್ನೂ ಎರಡು ದಿನ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.



ಭಾನುವಾರ ಸಂಜೆ ಮೈಸೂರು ರಸ್ತೆಯಲ್ಲಿ ಸುರಿದ ಜೋರು ಮಳೆಯಲ್ಲೇ ಸಾಗುತ್ತಿರುವ ವಾಹನಗಳು.



ಮೈಸೂರು ರಸ್ತೆಯಲ್ಲಿ ಕೊಡೆ ಹಿಡಿದು ಸಾಗಿದ ಯುವತಿ.



ಮೈಸೂರು ರಸ್ತೆಯಲ್ಲಿ ಮಳೆಯಲ್ಲೇ ಸಾಗಿದ ಮಹಿಳೆ.



ಶಿವಾಜಿನಗರದಲ್ಲಿ ಅಂಗಡಿಯೊಂದರಲ್ಲಿ ರಕ್ಷಣೆ ಪಡೆದ ಮಂದಿ.



ಶಿವಾಜಿನಗರದಲ್ಲಿ ರಸ್ತೆಬದಿ ವ್ಯಾಪಾರಿಗಳು ಪರದಾಡಿದರು.

VK ವಿಜಯ ಕರ್ನಾಟಕ

| Date | 16-11-2020 |
|---|---|
| Page No | 5 |


ನಿರ್ಬಂಧ, ಜಾಗೃತಿ ಹೊರತಾಗಿಯೂ ಅನಾಹುತ | ಇಬ್ಬರು ಚಿಣ್ಣರ ಕಣ್ಣಿಗೆ ಹಾನಿ

# ಪಟಾಕಿ ಸಿಡಿದು ಎಂಟು ಮಕ್ಕಳಿಗೆ ಗಾಯ

**ವಿಕ ಸುದ್ದಿಲೋಕ** ಬೆಂಗಳೂರು

ಮಾಮೂಲಿ ಪಟಾಕಿ ಮಾರಲು ನಿರ್ಬಂಧ, ಸಾಕಷ್ಟು ಜಾಗೃತಿ ಕಾರ್ಯಕ್ರಮಗಳ ಬಳಿಕವೂ ನಗರದಲ್ಲಿ ಪಟಾಕಿಯಿಂದ ಗಾಯಗೊಳ್ಳುವ ಘಟನೆಗಳು ಮುಂದುವರಿದಿವೆ.

ದೀಪಾವಳಿಯ ಎರಡನೇ ದಿನ ನಗರದಲ್ಲಿ ಪಟಾಕಿ ಸಿಡಿದು ಎಂಟು ಮಕ್ಕಳ ಕಣ್ಣಿಗೆ ಹಾನಿಯಾಗಿದೆ. ಗಂಭೀರ ಗಾಯವಾದ ಇಬ್ಬರು ಬಾಲಕರು ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸೋಮವಾರ ಇಬ್ಬರು ಗಾಯಗೊಂಡ ಪ್ರಕರಣ ಸೇರಿದಂತೆ ಒಟ್ಟು ಗಾಯಾಳುಗಳ ಸಂಖ್ಯೆ 10ಕ್ಕೆ ಏರಿಕೆಯಾಗಿದೆ.

**ಇಬ್ಬರು ಚಿಣ್ಣರಿಗೆ ಶಸ್ತ್ರಚಿಕಿತ್ಸೆ ಅನಿವಾರ್ಯ**

ಭಾನುವಾರದಂದು ಮಿಂಟೋರಿನ ಶಂಕರ ಕಣ್ಣಿನ ಆಸ್ಪತ್ರೆಯಲ್ಲಿ ಮೂವರು, ನಾರಾಯಣ ನೇತ್ರಾಲಯದಲ್ಲಿ ಇಬ್ಬರು ಹಾಗೂ ಮಿಂಟೋ ಆಸ್ಪತ್ರೆಯಲ್ಲಿ ಮೂವರು ಚಿಕಿತ್ಸೆ ಪಡೆದಿದ್ದಾರೆ. ಪಟಾಕಿಯಿಂದ ಹಾನಿಗೊಳಗಾದ 10 ಮಂದಿಯೂ ಮಕ್ಕಳೇ ಆಗಿದ್ದಾರೆ. ಚಿಕ್ಕ ಪ್ರಮಾಣದ ಗಾಯವಾದ ಹಿನ್ನೆಲೆಯಲ್ಲಿ ಈಗಾಗಲೇ 8 ಮಕ್ಕಳು ಆಸ್ಪತ್ರೆಯ ಹೊರರೋಗಿಗಳ ವಿಭಾಗದಲ್ಲಿ (ಒಪಿಡಿ) ಚಿಕಿತ್ಸೆ ಪಡೆದು ಮನೆಗೆ ತೆರಳಿದ್ದಾರೆ. ಉಳಿದಂತೆ ಇಬ್ಬರ ಕಣ್ಣಿಗೆ ಹೆಚ್ಚಿನ ಹಾನಿಯಾಗಿದ್ದು, ಮಿಂಟೋ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ.

**ಶಸ್ತ್ರಚಿಕಿತ್ಸೆ ಅನಿವಾರ್ಯ :** ಮಿಂಟೋ ಆಸ್ಪತ್ರೆಯಲ್ಲಿ ದಾಖಲಾಗಿರುವ ಮಾಗಡಿ ರಸ್ತೆಯ ನಾಲ್ಕು ವರ್ಷದ ಬಾಲಕ ಮತ್ತು ಹೆಗಡೆ ನಗರದ 12 ವರ್ಷದ ಬಾಲಕನ ಕಣ್ಣಿಗೆ ತೀವ್ರ ಗಾಯವಾಗಿದೆ. ಈ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ದಾಖಲಿಸಿಕೊಂಡು, ಶಸ್ತ್ರ ಚಿಕಿತ್ಸೆ ಮಾಡಬೇಕಿದೆ. ಶಸ್ತ್ರಚಿಕಿತ್ಸೆಗೊಳಪಡಿಸಲು ಕೊರೊನಾ ಸೋಂಕು ಪರೀಕ್ಷೆ ಕಡ್ಡಾಯವಾದ ಹಿನ್ನೆಲೆಯಲ್ಲಿ ಈ ಇಬ್ಬರು ಬಾಲಕರ ಗಂಟಲು ದ್ರವ ಮಾದರಿ ಸಂಗ್ರಹಿಸಿ ಆರ್‌ಟಿ-ಪಿಸಿಆರ್ ಪರೀಕ್ಷೆಗೆ ಕಳುಹಿಸಲಾಗಿದೆ ಎಂದು ಮಿಂಟೋ ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ.



ಮಿಂಟೋ ಆಸ್ಪತ್ರೆಯಲ್ಲಿ ಗಾಯಾಳು ಬಾಲಕನಿಗೆ ಚಿಕಿತ್ಸೆ



ಚಿಕ್ಕಪೇಟೆಯ ರಸ್ತೆ ಬದಿಯಲ್ಲಿ ನಿಯಮ ಉಲ್ಲಂಘಿಸಿ ಪಟಾಕಿ ವ್ಯಾಪಾರ ಮಾಡುತ್ತಿರುವುದು ಭಾನುವಾರ ಕಂಡು ಬಂತು.

**ಸುಟ್ಟಗಾಯವಾದರೆ ಏನು ಮಾಡಬೇಕು ?**



''ಪಟಾಕಿ ಸಿಡಿಸುವ ವೇಳೆ ಕಣ್ಣಿಗೆ ಹಾನಿಯಾದಲ್ಲಿ ನೀರಿನಿಂದ ತೊಳೆಯುವುದಾಗಲಿ, ಔಷಧ ಹಚ್ಚುವುದನ್ನಾಗಲೀ ಮಾಡಬಾರದು. ಶುಭ್ರವಾದ ಹತ್ತಿ ಅಥವಾ ಹತ್ತಿ ಬಟ್ಟೆಯಿಂದ ಕಣ್ಣನ್ನು ಮುಚ್ಚಿ ಹತ್ತಿರದ ಕಣ್ಣಿನ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆಯಬೇಕು,'' ಎಂದು ಮಿಂಟೋ ಆಸ್ಪತ್ರೆ ನಿರ್ದೇಶಕಿ ಡಾ. ಸುಜಾತಾ ರಾಥೋಡ್ ಸಲಹೆ ನೀಡಿದ್ದಾರೆ. ''ಕಣ್ಣು ಸೂಕ್ಷ್ಮ ಇಂದ್ರಿಯವಾಗಿರುವುದರಿಂದ ಅದನ್ನು ಉಜ್ಜಬಾರದು. ಆದರೆ, ದೇಹದ ಇತರೆ ಭಾಗಗಳಲ್ಲಿ ಚರ್ಮ ಸುಟ್ಟಾಗ ನೀರಿನಿಂದ ತೊಳೆದು ಆಸ್ಪತ್ರೆಗೆ ತೆರಳಬಹುದು,'' ಎಂದು ತಿಳಿಸಿದರು.

ಮಿಂಟೋ ಸಹಾಯವಾಣಿ
**9480832430**
ನಾರಾಯಣ ನೇತ್ರಾಲಯ
**080-66121405**

**ಎಚ್ಚರಿಕೆ ಪಾಲಿಸಿ**

- ಪಟಾಕಿ ಸಿಡಿಸುವಾಗ ಮುಖವನ್ನು ದೂರವಿಟ್ಟುಕೊಳ್ಳಬೇಕು.
- ಐದು ವರ್ಷದೊಳಗಿನ ಮಕ್ಕಳ ಕೈಗೆ ಪೋಷಕರು ಪಟಾಕಿ ಕೊಡಬಾರದು.
- ಮನೆ ಮತ್ತು ವಾಹನ ನಿಲುಗಡೆ ಸ್ಥಳದಲ್ಲಿ ಪಟಾಕಿ ಸುಡಬಾರದು.
- ಸುಟ್ಟ ಪಟಾಕಿಗಳನ್ನು ಮನಬಂದಂತೆ ಬಿಸಾಡಬಾರದು.

**ಕೋವಿಡ್ ಪರೀಕ್ಷೆ ಬಳಿಕ ಶಸ್ತ್ರಚಿಕಿತ್ಸೆ**

ಶಸ್ತ್ರ ಚಿಕಿತ್ಸೆ ಅಗತ್ಯವಿರುವ ಗಾಯಾಳುಗಳಿಗೆ ಕೋವಿಡ್-19 ಪರೀಕ್ಷೆ ಮಾಡಲಾಗುವುದು. ರ್‍ಯಾಪಿಡ್ ಆಂಟಿಜನ್ ಟೆಸ್ಟ್‌ನಲ್ಲಿ ನೆಗೆಟಿವ್ ಬಂದರೆ ತಕ್ಷಣದಲ್ಲೇ ಶಸ್ತ್ರಚಿಕಿತ್ಸೆ ಮಾಡಲಾಗುವುದು. ಬಳಿಕ ಪಾಸಿಟಿವ್ ಬಂದರೆ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು. ಗಾಯಾಳು ಬರುವಾಗಲೇ ಕೋವಿಡ್ ಪಾಸಿಟಿವ್ ಇದ್ದರೆ, ಅಂತಹವರನ್ನು ಕೋವಿಡ್-19 ವಾರ್ಡ್‌ಗೆ ದಾಖಲಿಸಿ ಶಸ್ತ್ರ ಚಿಕಿತ್ಸೆ ಮಾಡಲಾಗುವುದು,'' ಎಂದು ಡಾ. ಸುಜಾತಾ ರಾಥೋಡ್ ವಿವರಿಸಿದರು.

## ಪಟಾಕಿ ವ್ಯಾಪಾರ ಕುಸಿತ

**ವಿಕ ಸುದ್ದಿಲೋಕ** ಬೆಂಗಳೂರು

ಈ ಬಾರಿ ಒಂದೆಡೆ ಮಳೆ ಮತ್ತೊಂದೆಡೆ ಹಸಿರು ಪಟಾಕಿಗಳಿಗೆ ಮಾತ್ರ ಅನುಮತಿ ನೀಡಿರುವುದರಿಂದ ಪಟಾಕಿ ವ್ಯಾಪಾರದಲ್ಲಿ ಭಾರಿ ಇಳಿಕೆಯಾಗಿದೆ. ಅಷ್ಟೇ ಅಲ್ಲ, ಮಾರಾಟ ಮಳಿಗೆಗಳ ಪ್ರಮಾಣವೂ ಶೇ.60-70 ರಷ್ಟು ಇಳಿಕೆಯಾಗಿದೆ.

ಪ್ರತಿ ವರ್ಷ ಮಲ್ಲೇಶ್ವರಂ ಮೈದಾನದಲ್ಲಿ 20-30 ಮಳಿಗೆಗಳಿಗೆ ಅವಕಾಶ ನೀಡಲಾಗುತ್ತಿತ್ತು. ಈ ಬಾರಿ ಅನುಮತಿ ಕೊಟ್ಟರೂ ಮಾರಾಟಗಾರರು ಮುಂದೆ ಬರುತ್ತಿಲ್ಲ. ಹೀಗಾಗಿ, ಇಲ್ಲಿ ಈ ವರ್ಷ ಕೇವಲ ಆರು ಮಳಿಗೆಗಳನ್ನು ಮಾತ್ರ ತೆರೆಯಲಾಗಿದೆ.

ಅದೇ ರೀತಿ ಹೊಂಬೇಗೌಡನಗರ ಆಟದ ಮೈದಾನದಲ್ಲಿ ಪ್ರತಿ ವರ್ಷ 10-15 ಮಳಿಗೆಗಳನ್ನು ತೆರೆಯಲಾಗುತ್ತಿತ್ತು. ಆದರೆ ಈ ಬಾರಿ ಕೇವಲ ಎರಡು ಮಳಿಗೆಗಳನ್ನು ಮಾತ್ರ ತೆರೆಯಲಾಗಿದೆ.

''ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಶೇ. 50ರಷ್ಟು ವಹಿವಾಟು ಕುಸಿದಿದೆ. 15 ಮಳಿಗೆಗಳನ್ನು ತೆರೆಯಲು ಅನುಮತಿ ನೀಡಲಾಗಿತ್ತು. ಆದರೆ ಇಬ್ಬರು ಮಾತ್ರ ತೆರೆದಿದ್ದೇವೆ. ಶನಿವಾರ ಸ್ವಲ್ಪ ವ್ಯಾಪಾರವಾಯಿತು. ಆದರೆ ಭಾನುವಾರ ವ್ಯಾಪಾರ ತುಂಬಾ ಕಡಿಮೆ. ಸಂಜೆ ಮಳೆ ಬಿದ್ದಿದ್ದರಿಂದ ಮತ್ತಷ್ಟು ಕುಸಿಯಿತು'' ಎನ್ನುತ್ತಾರೆ ಹೊಂಬೇಗೌಡನಗರ ಮೈದಾನದ ಸ್ಟಾರ್ ಕ್ರ್ಯಾಕರ್ಸ್ ಮಳಿಗೆಯ ಮಾರಾಟಗಾರರಾದ ಸುದರ್ಶನ್ ಮತ್ತು ಅಸಾದುಲ್ಲಾ ಬೇಗ್.

**ಹಸಿರು ಪಟಾಕಿಗಳ ಬಗ್ಗೆ ಅರಿವಿಲ್ಲ:** ಪಟಾಕಿ ಅಂಗಡಿಗೆ ಬಂದ ಗ್ರಾಹಕರು ಗ್ರೀನ್ ಪಟಾಕಿ ಕೊಡಿ ಎನ್ನುತ್ತಾರೆ. ಸಾಕಷ್ಟು ಮಾರಾಟಗಾರರು ತಮ್ಮ ಮಳಿಗೆಯಲ್ಲಿರುವ ಪಟಾಕಿಗಳನ್ನು ಕೊಡುತ್ತಾರೆ. ಆದರೆ, ಅದು ಬೇರಿಯಂ ನೈಟ್ರೇಟ್ (ಶಬ್ದ ಮತ್ತು ಮಾಲಿನ್ಯ ಪ್ರಮಾಣ ಕಡಿಮೆಯಿರುವ ಹಾಗೂ ವಿಷಕಾರಿಯಲ್ಲದ ಪಟಾಕಿ) ಬಳಸದೆ ತಯಾರಿಸಿದ ಪಟಾಕಿಗಳಾಗಿರುವುದಿಲ್ಲ. ಆದರೂ ಇದನ್ನು ಪ್ರಶ್ನಿಸದೆ ಕೊಂಡೊಯ್ಯುತ್ತಿದ್ದಾರೆ.



ಮಳೆಯಿಂದ ಕೆಸರುಮಯವಾದ ಮಲ್ಲೇಶ್ವರಂ ಮೈದಾನ

**ಮಾರ್ಷಲ್‌ಗಳಿಂದ ದಂಡ**

ಜಯನಗರ 4ನೇ ಬಡಾವಣೆಯಲ್ಲಿ ಮಾಮೂಲಿ ಪಟಾಕಿ ಮಾರುತ್ತಿದ್ದ ನಿಷೇಧಿತ ಪಟಾಕಿಗಳನ್ನೂ ಮಾರಾಟ ಮಾಡಲಾಗುತ್ತಿತ್ತು. ಇಂತಹ ಮಳಿಗೆಗಳಿಗೆ ಭೇಟಿ ನೀಡಿ ಪರಿಶೀಲಿಸಿದ ಬಿಬಿಎಂಪಿಯ ಮಾರ್ಷಲ್‌ಗಳು ದಂಡ ವಿಧಿಸಿದರು.

**ಭಾನುವಾರ ಉತ್ತಮ ವ್ಯಾಪಾರವಾಗುವ ನಿರೀಕ್ಷೆ ಇತ್ತು. ಮಳೆಯಿಂದಾಗಿ ಮೈದಾನ ಪೂರ್ತಿ ಕೆಸರುಗದ್ದೆಯಾಗಿದೆ. ಶೇ.15ರಷ್ಟು ಮಾತ್ರ ವ್ಯಾಪಾರವಾಗಿದೆ.**

**- ಆರ್. ಚಂದ್ರಶೇಖರ್** ಪಟಾಕಿ ಮಾರಾಟಗಾರ, ಮಲ್ಲೇಶ್ವರಂ ಮೈದಾನ

ವಿಜಯ ಕರ್ನಾಟಕ

| Date | 16-11-2020 |
| --- | --- |
| Page No | 5 |

ಲಂಚ ಪಡೆದು ಮೌನ ವಹಿಸುವ ಅಧಿಕಾರಿಗಳು | ನಿಯಮ ಉಲ್ಲಂಘಿಸಿದರೂ ಕ್ರಮ ಇಲ್ಲ

# ಅಕ್ರಮ ಗೋದಾಮು, ಕಾರ್ಖಾನೆ ಕುರಿತು ಜಾಣ ಕುರುಡು

■ ಮಂಜುನಾಥ ನಾಗಲೀಕರ್
ಬೆಂಗಳೂರು
manjunath.naglikar@timesgroup.com

ವಿಕ ವಿಶೇಷ



ಬಿಬಿಎಂಪಿ, ಮಾಲಿನ್ಯ ನಿಯಂತ್ರಣ ಮಂಡಳಿ, ಅಗ್ನಿಶಾಮಕ, ಪೊಲೀಸ್ ಇಲಾಖೆ ಸೇರಿ ಸಂಬಂಧಪಟ್ಟ ಎಲ್ಲ ಇಲಾಖೆಗಳ ನಿರ್ಲಕ್ಷ್ಯತನವೇ ಹೊಸ ಗುಡ್ಡದಹಳ್ಳಿಯಲ್ಲಿನ ಕೆಮಿಕಲ್ ಕಾರ್ಖಾನೆಯಲ್ಲಿ ಅಗ್ನಿ ದುರಂತ ಸಂಭವಿಸಲು ಆಸ್ಪದ ಮಾಡಿಕೊಟ್ಟಂತಾಗಿದೆ.

ದೊಡ್ಡ ಜಾಗಗಳಲ್ಲಿರುವ ಗೋದಾಮು, ಮಳಿಗೆ, ಕಾರ್ಖಾನೆಗಳು ಸಾಮಾನ್ಯವಾಗಿ ಈ ಎಲ್ಲ ಇಲಾಖೆಗಳ ಗಮನಕ್ಕೆ ಬಾರದೇ ನಡೆಯುವುದೇ ಇಲ್ಲ. ಪ್ರತಿಯೊಂದು ವ್ಯಾಪಾರ, ವಹಿವಾಟಿನ ಕುರಿತಾಗಿ ಬಿಬಿಎಂಪಿ ಮತ್ತು ಪೊಲೀಸರೂ ಸೇರಿದಂತೆ ಎಲ್ಲರಿಗೂ ಮಾಹಿತಿ ಇರುತ್ತದೆ. ಆದರೆ, ಸುರಕ್ಷತೆ ವಿಚಾರವಾಗಿ ಈ ಇಲಾಖೆಗಳು ಜಾಣ ಕುರುಡು ಪ್ರದರ್ಶಿಸುತ್ತಿವೆ. ಇದರಿಂದಾಗಿ ಅಕ್ರಮ ಗೋದಾಮುಗಳು ತಮ್ಮ ಚಟುವಟಿಕೆಗಳನ್ನು ಮುಂದುವರಿಸುತ್ತವೆ. ಅಂತಿಮವಾಗಿ ಏನಾದರೂ ಅನಾಹುತ ಸಂಭವಿಸಿದಾಗ ಮಾತ್ರ ಎಲ್ಲ ಇಲಾಖೆಗಳು ಎಚ್ಚೆತ್ತುಕೊಳ್ಳುತ್ತವೆ.

### ಜನವಸತಿ ಪ್ರದೇಶದಲ್ಲಿ ಕಾರ್ಯಾಚರಣೆಗೆ ಅವಕಾಶ

### ಅನಾಹುತ ಸಂಭವಿಸಿದಾಗ ಮಾತ್ರ ಎಚ್ಚರ

**ಅಧಿಕಾರಿ, ಸಿಬ್ಬಂದಿಗೆ ಲಂಚ:** ಅಪಾಯಕಾರಿ ವಸ್ತುಗಳನ್ನು ಸಂಗ್ರಹಿಸಿರುವ ಗೋದಾಮು, ಮಳಿಗೆಗಳ ವಹಿವಾಟುಗಳನ್ನು ನಡೆಸುವವರು ತಮ್ಮ ವಹಿವಾಟುಗಳಿಗೆ ಧಕ್ಕೆ ಬಾರದಂತೆ ಸಂಬಂಧಪಟ್ಟ ಸರಕಾರದ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿಗೆ ಪ್ರತಿ ತಿಂಗಳು ಲಂಚ ನೀಡುತ್ತಾರೆ. ಇದರಿಂದ ಅಧಿಕಾರಿಗಳು ಅಕ್ರಮ ಚಟುವಟಿಕೆಗಳಿಗೆ ಆಸ್ಪದ ನೀಡುತ್ತಾರೆ.

**ವಾಹನ ಓಡಾಡಲು ದಾರಿ ಇರಬೇಕು:** ಸ್ಫೋಟಕ ಗುಣ ಹೊಂದಿರುವ ಕೆಮಿಕಲ್ ಸೇರಿದಂತೆ ಯಾವುದೇ ವಸ್ತುಗಳನ್ನು ಸಂಗ್ರಹಿಸಿಡಲು ಅಥವಾ ಉತ್ಪನ್ನಗಳನ್ನು ಉತ್ಪಾದನೆಗೆ ಬಳಸಬೇಕೆಂದಿದ್ದರೆ ರಸ್ತೆ ಸಂಪರ್ಕ ಸರಿ ಇರಬೇಕು. ಬೆಂಕಿ ಹೊತ್ತಿಕೊಂಡರೆ ಅಗ್ನಿಶಾಮಕ ಸಿಬ್ಬಂದಿ ಶೀಘ್ರ ತಲುಪುವಂತಿರಬೇಕು. ಅಲ್ಲದೆ, ಗೋದಾಮುಗಳಲ್ಲೇ ತುರ್ತು ಅಗ್ನಿಶಾಮಕ ಸಾಧನಗಳನ್ನು ಅಳವಡಿಸಿಕೊಂಡಿರಬೇಕು. ಅಕ್ಕ-ಪಕ್ಕದಲ್ಲಿ ಖಾಲಿ ಜಾಗ ಬಿಡುವ ಮೂಲಕ ಬೇರೆ ಮಳಿಗೆ, ಅಂಗಡಿಗಳಿಗೆ ತೊಂದರೆಯಾಗಬಾರದು. ಆದರೆ, ಈ ಸೂಚನೆಗಳು ಪಾಲನೆಯಾಗುತ್ತಿಲ್ಲ.

**ಜಾಲತಾಣಗಳಲ್ಲಿ ಟೀಕೆ:** ''ಅಗ್ನಿ ಅನಾಹುತ ನಡೆದಿರುವ ಇಂತಹ ಗೋದಾಮುಗಳು ಎಲ್ಲ ಕಡೆ ಸಿಗುತ್ತವೆ. ಇಲಾಖೆಗಳು ಜಾಣ ಕುರುಡು ಪ್ರದರ್ಶನ ಮಾಡುತ್ತಾರೆ. ಜನರ ಸುರಕ್ಷತೆ ಗಮನದಲ್ಲಿಟ್ಟುಕೊಂಡು ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಅವರಿಗೆ ಲಂಚ ಸಿಗುವುದಿಲ್ಲ, ಇದರಲ್ಲಿ ಹಲವು ಇಲಾಖೆಗಳ ಲೋಪ ಇದೆ,'' ಎಂದು ಹೊಸಗುಡ್ಡದಹಳ್ಳಿ ಘಟನೆ ವಿಚಾರವಾಗಿ ಸಾರ್ವಜನಿಕರು ಜಾಲತಾಣಗಳಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

### ಮಾಹಿತಿ ಸಂಗ್ರಹಿಸಲು ಆಯುಕ್ತರ ಸೂಚನೆ

ಸ್ಫೋಟಕ ಗುಣ ಹೊಂದಿರುವ ರಾಸಾಯನಿಕಗಳನ್ನು ಅಕ್ರಮವಾಗಿ ಸಂಗ್ರಹಿಸಿರುವ ಗೋದಾಮುಗಳು ಮತ್ತು ಫ್ಯಾಕ್ಟರಿಗಳ ಕುರಿತು ಮಾಹಿತಿ ಸಂಗ್ರಹಿಸುವಂತೆ ನಗರದ ಎಲ್ಲ ಠಾಣೆಗಳ ಠಾಣಾಧಿಕಾರಿಗಳಿಗೆ ನಗರ ಪೊಲೀಸ್ ಆಯುಕ್ತ ಕಮಲ್ ಪಂತ್ ನಿರ್ದೇಶನ ನೀಡಿದ್ದಾರೆ. ಜನವಸತಿ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ರಾಸಾಯನಿಕ ಕಾರ್ಖಾನೆ, ಗೋದಾಮುಗಳನ್ನು ಪತ್ತೆ ಮಾಡಿ ಪರಿಶೀಲನೆ ನಡೆಸುವಂತೆ ಗೃಹ ಸಚಿವರು ಸೂಚನೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಪೊಲೀಸ್ ಆಯುಕ್ತರು ಎಲ್ಲ ಠಾಣೆಗಳಿಗೆ ತುರ್ತು ಮೆಮೊ ಹೊರಡಿಸುವ ಮೂಲಕ ನಿರ್ದೇಶನ ನೀಡಿದ್ದಾರೆ.

VK
ವಿಜಯ ಕರ್ನಾಟಕ

| Date | 16-11-2020 |
| --- | --- |
| Page No | 6 |


ಎನ್‌ಜಿಟಿ ಚಾಟಿ ಬೀಸಿದ ಬಳಿಕ ಎಚ್ಚೆತ್ತ ಸರಕಾರ | ಡಿಸೆಂಬರ್ ಮೊದಲ ವಾರದಲ್ಲಿ ಕಾಮಗಾರಿ ಆರಂಭ ಸಾಧ್ಯತೆ

# ಬೆಳ್ಳಂದೂರು ಕೆರೆ ಹೂಳೆತ್ತಲು ಸಿದ್ಧತೆ

**ಆರ್. ತುಳಸಿಕುಮಾರ್** ಬೆಂಗಳೂರು
tulasi.kumar@timesgroup.com

ರಾಷ್ಟ್ರ ಮಟ್ಟದಲ್ಲಿ ಸದ್ದು ಮಾಡಿದ್ದ ಬೆಳ್ಳಂದೂರು-ವರ್ತೂರು ಕೆರೆಗಳ ನೊರೆ ಸಮಸ್ಯೆಯನ್ನು ಪೂರ್ಣವಾಗಿ ನಿವಾರಿಸಲು ಎರಡೂ ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ಕೆ ಡಿಸೆಂಬರ್ ಮೊದಲ ವಾರದಲ್ಲಿ ಚಾಲನೆ ಸಿಗಲಿದೆ.




**2021ರ ಅಂತ್ಯದೊಳಗೆ ಕಾಮಗಾರಿ ಪೂರ್ಣ ನಿರೀಕ್ಷೆ**

**ಕ್ವಾರಿಯಲ್ಲಿ ಹೂಳು ಸುರಿಯಲು ಕೆಎಸ್‌ಪಿಸಿಬಿ ಒಪ್ಪಿಗೆ**

ಕಳೆದೊಂದು ವರ್ಷದಿಂದ ನೊರೆ ಸಮಸ್ಯೆ ಉದ್ಭವಿಸಿಲ್ಲ. ಎರಡೂ ಕೆರೆಗಳ ಕೋಡಿ ಬಳಿ ನೀರು ಸರಾಗವಾಗಿ ಹರಿದುಹೋಗಲು ಪ್ರತ್ಯೇಕ ಕಾಲುವೆಗಳನ್ನು ನಿರ್ಮಿಸಲಾಗಿದೆ. ಕೆರೆಗೆ ತ್ಯಾಜ್ಯ ನೀರು ಹರಿಯುವಿಕೆ ಕೂಡ ಗಣನೀಯ ಪ್ರಮಾಣದಲ್ಲಿ ಇಳಿಕೆ ಕಂಡಿದೆ. ಈಗ ಹೂಳೆತ್ತುವ ಕಾಮಗಾರಿ ಕೈಗೊಳ್ಳುವುದರಿಂದ ಕೆರೆಗೆ ಹೊಸ ರೂಪ ಸಿಗುವ ನಿರೀಕ್ಷೆ ಇದೆ. 2021ರ ಅಂತ್ಯದೊಳಗೆ ಹೂಳನ್ನು ಹೊರಹಾಕುವ ಕೆಲಸ ಪೂರ್ಣಗೊಂಡಲ್ಲಿ ಕೆರೆಯಲ್ಲಿನ ಕಲ್ಮಷ ದೂರವಾಗಿ ಹೊಸ ನೀರು ಸಂಗ್ರಹಿಸಲು ಸಾಧ್ಯವಾಗಲಿದೆ.

ಎನ್‌ಜಿಟಿ ಸತತವಾಗಿ ಚಾಟಿ ಬೀಸಿದ ಪರಿಣಾಮ ಎರಡೂ ಕೆರೆಗಳು ಅಭಿವೃದ್ಧಿಗೆ ವೇಗ ಸಿಕ್ಕಿದೆ. ರಾಜ್ಯ ಸರಕಾರ ಹಿಂದಿನ ವರ್ಷ ಕೆರೆ ಅಭಿವೃದ್ಧಿಗೆ 500 ಕೋಟಿ ರೂ. ನಿಗದಿ ಮಾಡಿತ್ತು. ಆದರೆ, ಹೂಳನ್ನು ಹೇಗೆ, ಎಲ್ಲಿಗೆ ಸಾಗಿಸಬೇಕು ಎಂಬುದು ಅಂತಿಮ ಆಗಿರಲಿಲ್ಲ. ನಗರದಾಚೆಗಿನ ಕ್ವಾರಿಗಳಿಗೆ ಹೂಳು ಸುರಿದರೆ ಸಾಗಣೆ ವೆಚ್ಚ ಹಾಗೂ ಪರಿಸರ ಮೇಲೆ ಪರಿಣಾಮ ಉಂಟಾಗಲಿದೆ ಎಂಬ ಆಕ್ಷೇಪ ಕೇಳಿಬಂದಿತ್ತು. ಈ ವಿಚಾರದಲ್ಲಿ ಸ್ಪಷ್ಟ ನಿರ್ಧಾರ ಕೈಗೊಳ್ಳಲು ಒಂದು ವರ್ಷ ಕಳೆದಿದೆ.

**ಹೂಳೆತ್ತಲು 136 ಕೋಟಿ ರೂ. ಟೆಂಡರ್:** ಬೆಳ್ಳಂದೂರು ಹಾಗೂ ವರ್ತೂರು ಕೆರೆಗಳ ಅಭಿವೃದ್ಧಿ ಭಾಗವಾಗಿ ಹೂಳೆತ್ತುವ ಕಾರ್ಯಕ್ಕೆ 136 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ. ಬೆಳ್ಳಂದೂರು ಕೆರೆಗೆ 93 ಕೋಟಿ ರೂ. ಹಾಗೂ ವರ್ತೂರು ಕೆರೆಗೆ 43 ಕೋಟಿ ರೂ. ಮೊತ್ತದ ಟೆಂಡರ್ ಅಂತಿಮಗೊಳಿಸಲಾಗಿದೆ. ಕಾಮಗಾರಿ ಕಾರ್ಯಾದೇಶವನ್ನು ಸಂಬಂಧಿಸಿದ ಗುತ್ತಿಗೆ ಕಂಪನಿಗೆ ಸದ್ಯದಲ್ಲೇ ನೀಡಲಾಗುತ್ತದೆ. ಈಗಾಗಲೇ ಎರಡೂ ಕೆರೆಯಲ್ಲಿ ಬೆಳೆದಿರುವ ಕಳೆ ಸಸ್ಯವನ್ನು ಸ್ವಲ್ಪ ಭಾಗ ತೆರವುಗೊಳಿಸಲಾಗಿದೆ. ಜತೆಗೆ ಮಳೆ ಕಡಿಮೆಯಾಗಿರುವುದು ಕಾಮಗಾರಿಗೆ ಅಡ್ಡಿಯಾಗದು ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ.

## ರಸ್ತೆ ಅಭಿವೃದ್ಧಿ ಭರವಸೆ

ಕೆರೆಯಲ್ಲಿ ಹೂಳೆತ್ತಿ ಅದನ್ನು ಕ್ವಾರಿಗಳಿಗೆ ಸಾಗಿಸಲು ಬೆಳ್ಳಂದೂರು ರಸ್ತೆ ಹಾಗೂ ನೈಸ್ ರೋಡ್ ಬಳಿ ಕ್ವಾರಿಗೆ ತೆರಳುವ ಮಾರ್ಗ ಹಾಳಾಗಿದೆ. ಈ ಮಾರ್ಗದಲ್ಲಿ ಹೂಳು ತುಂಬಿದ ಟಿಪ್ಪರ್‌ಗಳು ಸತತವಾಗಿ ಸಾಗುವುದರಿಂದ ರಸ್ತೆ ಇನ್ನಷ್ಟು ಹಾಳಾಗಲಿದೆ ಎಂದು ಸ್ಥಳೀಯರು ಆಕ್ಷೇಪಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಬಿಡಿಎ ಹಾಗೂ ಬಿಬಿಎಂಪಿ ರಸ್ತೆ ಅಭಿವೃದ್ಧಿಯ ಭರವಸೆ ನೀಡಿವೆ.

**ಬೆಳ್ಳಂದೂರು-ವರ್ತೂರು ಕೆರೆಗಳಲ್ಲಿ ಹೂಳೆತ್ತುವ ಕಾರ್ಯ ಶೀಘ್ರ ಆರಂಭವಾಗಲಿದೆ. ಈಗಾಗಲೇ ಸ್ವಲ್ಪ ಭಾಗದಲ್ಲಿ ಕಳೆ ಸಸ್ಯ ತೆಗೆಯಲಾಗಿದೆ. ಟೆಂಡರ್ ಅಂತಿಮವಾಗಿರುವ ಕಾರಣ ಕಾಲಮಿತಿಯಲ್ಲಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.**

**- ಮಹದೇವ ಗೌಡ**
ಕಾರ್ಯಪಾಲಕ ಎಂಜಿನಿಯರ್,
ಬಿಡಿಎ(ಪೂರ್ವ ವಿಭಾಗ)

## ಪಿಎಂಸಿಯಿಂದ ಕಾಮಗಾರಿ ಮೇಲೆ ನಿಗಾ

ಎನ್‌ಜಿಟಿ ಆದೇಶದನ್ವಯ ಕೆರೆ ಅಭಿವೃದ್ಧಿ ಯೋಜನೆ ಮೇಲ್ವಿಚಾರಣಾ ಸಮಿತಿ(ಪಿಎಂಸಿ)ಯು ಈಗಾಗಲೇ ನಿವೃತ್ತ ನ್ಯಾ.ಸಂತೋಷ್ ಹೆಗ್ಡೆ ನೇತೃತ್ವದಲ್ಲಿ ಅಸ್ತಿತ್ವದಲ್ಲಿದೆ. ಇದೇ ಸಮಿತಿಯು ಹೂಳೆತ್ತುವ ಕಾಮಗಾರಿ ಮೇಲೂ ನಿಗಾ ಇರಿಸಲಿದೆ. ಕೆರೆಯಿಂದ ಎತ್ತುವ ಹೂಳನ್ನು ವಿಟ್ಟಸಂದ್ರ ಹಾಗೂ ಮೈಲಸಂದ್ರ ಕ್ವಾರಿಗಳಲ್ಲಿ ಸುರಿಯಲಾಗುತ್ತದೆ. ಇದಕ್ಕೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ(ಕೆಎಸ್‌ಪಿಸಿಬಿ) ಒಪ್ಪಿಗೆ ನೀಡಿದೆ. ಅದಕ್ಕೂ ಮುನ್ನ ಭವಿಷ್ಯದಲ್ಲಿ ಕ್ವಾರಿಗಳಿಂದ ಸಮಸ್ಯೆಯಾಗದಿರಲು ರಾಸಾಯನಿಕ ದ್ರಾವಣದಿಂದ ಉಪಚರಿಸಲಾಗುತ್ತದೆ.

ವಿಜಯ ಕರ್ನಾಟಕ

| Date | 16-11-2020 |
|---|---|
| Page No | 6 |

# ಪೈಪ್‌ಲೈನ್ ಕಾಮಗಾರಿಯಿಂದ ರಸ್ತೆ ಸಂಪೂರ್ಣ ಹಾಳು



ಲೊಟ್ಟೆಗೊಲ್ಲನಹಳ್ಳಿ ಗಾಂಧಿ ಶಾಲೆ ಎರಡನೆ ಕ್ರಾಸ್ ರಸ್ತೆಯ ಅವ್ಯವಸ್ಥೆ

**ಹೆಬ್ಬಾಳ:** ಜಲಮಂಡಳಿಯ ಪೈಪ್‌ಲೈನ್ ಕಾಮಗಾರಿಯಿಂದ ಲೊಟ್ಟೆಗೊಲ್ಲನಹಳ್ಳಿ ಗಾಂಧಿ ಶಾಲೆ ಎರಡನೆ ಕ್ರಾಸ್ ರಸ್ತೆ ಸಂಪೂರ್ಣ ಹಾಳಾಗಿದೆ. ಹಲವು ವರ್ಷಗಳಿಂದಲೂ ರಸ್ತೆ ದುರಸ್ತಿ ಕಂಡಿಲ್ಲ. ಈ ಮಧ್ಯೆ ಕೆಲ ತಿಂಗಳ ಹಿಂದೆ ಜಲಮಂಡಳಿ ಪೈಪ್ ಅಳವಡಿಕೆಗಾಗಿ ರಸ್ತೆಯನ್ನು ಬೇಕಾಬಿಟ್ಟಿ ಅಗೆದಿದೆ. ರಸ್ತೆಯ ಇಕ್ಕೆಲಗಳಲ್ಲಿ, ಕೆಲವಡೆ ಮಧ್ಯ ಭಾಗದಲ್ಲಿ ಅಗೆಯಲಾಗಿದೆ. ಕಾಮಗಾರಿ ಬಳಿಕ ದುರಸ್ತಿ ನಡೆದಿಲ್ಲ. ಇದರಿಂದಾಗಿ ವಾಹನ ಸಂಚರಿಸುವುದೇ ಕಷ್ಟವಾಗಿದೆ.

**ದೂರು ಕೊಟ್ಟರೂ ಸ್ಪಂದಿಸದ ಪಾಲಿಕೆ**

ಶಾಸಕರ ಕಚೇರಿ, ಪಾಲಿಕೆ ಸದಸ್ಯರ ಕಚೇರಿ ಕೂಗಳತೆಯಲ್ಲೇ ಈ ಪ್ರದೇಶ ಇದೆ. ''ಪಾಲಿಕೆ ಸದಸ್ಯರು, ಬಿಬಿಎಂಪಿ ಎಂಜಿನಿಯರುಗಳಿಗೆ ಹಲವು ಬಾರಿ ಅರ್ಜಿ ಸಲ್ಲಿಸಿದ್ದೇವೆ. ಪಾಲಿಕೆ ಸಹಾಯಕ ಎಂಜಿನಿಯರ್ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ಶಾಸಕರ ಗಮನಕ್ಕೂ ತಂದಿದ್ದೇವೆ. ಹೀಗಿದ್ದರೂ ರಸ್ತೆ ದುರಸ್ತಿ ಆಗಿಲ್ಲ'' ಎಂದು ಸ್ಥಳೀಯ ನಿವಾಸಿ ನಾಗರಾಜಶೆಟ್ಟಿ ಅಳಲು ತೋಡಿಕೊಂಡರು.

ವಿಜಯ ಕರ್ನಾಟಕ

| Date | 16-11-2020 |
| --- | --- |
| Page No | 6 |



ಬೆಂಗಳೂರು-ಹೊಸೂರು ಮುಖ್ಯರಸ್ತೆಯಲ್ಲಿ ಆಡುಗೋಡಿ ಬಳಿ ರಸ್ತೆ ವಿಸ್ತರಣೆಗಾಗಿ ಬೃಹತ್ ಮರಗಳನ್ನು ಕಡಿದು ಹಾಕಲಾಗಿದೆ.

VK ವಿಜಯ ಕರ್ನಾಟಕ

| Date | 16-11-2020 |
| --- | --- |
| Page No | 6 |

# ಬೆಳಕಿನ ಹಬ್ಬದ ಸಂಭ್ರಮ



ಜಯನಗರದಲ್ಲಿ ಪೌರಕಾರ್ಮಿಕರಿಗಾಗಿ ರಂಗೋಲಿ ಸ್ಪರ್ಧೆ ಆಯೋಜಿಸಲಾಗಿತ್ತು .

**ವಿಕ ಸುದ್ದಿಲೋಕ** ಬೆಂಗಳೂರು

ಕೊರೊನಾ ಕರಿನೆರಳಿನ ನಡುವೆಯೂ ನಗರದಲ್ಲಿ ದೀಪಾವಳಿಯನ್ನು ಸಡಗರದಿಂದ ಆಚರಿಸಲಾಯಿತು.

ದೀಪಾವಳಿಯ ಎರಡನೇ ದಿನವಾದ ಭಾನುವಾರ ಅರ್ಧ ದಿನ ಮಾತ್ರ ಅಮಾವಾಸ್ಯೆ ಇದ್ದುದರಿಂದ ಬೆಳಗ್ಗೆಯೇ ಗೌರಿ ಪೂಜೆ ಹಾಗೂ ಲಕ್ಷ್ಮೀ ಪೂಜೆಯನ್ನು ನೆರವೇರಿಸಲಾಯಿತು. ಕೆಲವರು ಮನೆ ಬಳಿಯಿರುವ ಗೌರಿಯ ಪ್ರತೀಕವಾದ ಬಾಳೆ ಸಸಿಗೆ ಪೂಜೆ(ನೋಮುವ ಸಂಪ್ರದಾಯವುಳ್ಳವರು) ಸಲ್ಲಿಸಿದರು.

ಎಂದಿನಂತೆ ಚೆಂದದ ರಂಗವಲ್ಲಿ ಬಿಡಿಸಿ ಮನೆಯಲ್ಲಿ ಸಿಹಿ ಅಡುಗೆ ತಯಾರಿಸಿ, ಮನೆ ಮಂದಿಯೆಲ್ಲಾ ಸವಿದರು. ಬೆಳಗ್ಗೆಯಿಂದ ರಾತ್ರಿಯವರೆಗೂ ದೇವಾಲಯಗಳಲ್ಲಿ ವಿಶೇಷ ಪೂಜೆ ನಡೆಯಿತು.

**ಮಳೆಯಿಂದ ಸಮಸ್ಯೆ:** ಸಂಜೆಯ ವೇಳೆಗೆ ಮಳೆ ಬಂದಿದ್ದರಿಂದ ಕೆಲವೆಡೆ ಮನೆಯ ಹೊರಗೆ ದೀಪ ಹಚ್ಚಲು ಸಮಸ್ಯೆಯಾಯಿತು. ಆದರೆ ಆಕಾಶ ಬುಟ್ಟಿಗಳು ಮನೆಯ ಅಂದ ಹೆಚ್ಚಿಸಿದ್ದವು.

ವಿಜಯ ಕರ್ನಾಟಕ

| Date | 16-11-2020 |
| --- | --- |
| Page No | 6 |

ರಸ್ತೆ ದುರಸ್ತಿಗೆ ಬಿಬಿಎಂಪಿ ನಿರ್ಲಕ್ಷ್ಯ | ಮನವಿಗೆ ಸ್ಪಂದಿಸದ ಜನಪ್ರತಿನಿಧಿಗಳು

# ಸಾರ್ವಜನಿಕರೇ ಚಂದಾ ಎತ್ತಿ ರಸ್ತೆ ದುರಸ್ತಿ ಮಾಡಿದ್ರು

■ **ರವಿಕುಮಾರ ಬೆಟ್ಟದಪುರ,** ಬೆಂಗಳೂರು

ಕೆಸರುಗದ್ದೆಯಂತಾಗಿದ್ದ ರಸ್ತೆಯನ್ನು ಸ್ಥಳೀಯ ನಿವಾಸಿಗಳೇ ಚಂದಾ ಎತ್ತಿ ದುರಸ್ತಿಗೊಳಿಸಿ ತಾತ್ಕಾಲಿಕವಾಗಿ ಹೊಸ ರೂಪ ನೀಡಿದ್ದಾರೆ!

ಬೆಳ್ಳಂದೂರು ವಾರ್ಡ್‌ನ ಕಸವನಹಳ್ಳಿಯಿಂದ ಸರ್ಜಾಪುರದ ಕಡೆಗೆ ಹೋಗುವ ಹಾಗೂ ಓನರ್ಸ್ ಕೋರ್ಟ್ ಲೇಔಟ್‌ನ ಪೂರ್ವ ಮತ್ತು ಪಶ್ಚಿಮಕ್ಕೆ ಸಂಪರ್ಕ ಕಲ್ಪಿಸುವ ಓನರ್ಸ್ ಕೋರ್ಟ್ ಲೇಔಟ್ ಲೇನ್ ರಸ್ತೆಯಲ್ಲಿ ಕಾವೇರಿ ಕುಡಿಯುವ ನೀರು ಮತ್ತು ಒಳಚರಂಡಿ ಪೈಪ್ ಅಳವಡಿಸಲು ಜಲಮಂಡಳಿಯು ಅಗೆದಿದೆ. ಸುಮಾರು ಮೂರೂವರೆ ವರ್ಷಗಳಿಂದಲೂ ಕಾಮಗಾರಿ ನಡೆಯುತ್ತಿದ್ದು, ಇನ್ನೂ ಮುಕ್ತಿ ದೊರೆತಿಲ್ಲ. ಈ ನಡುವೆ ಇತ್ತೀಚೆಗೆ ಸುರಿದ ಮಳೆ ಅವಾಂತರ ಸೃಷ್ಟಿಸಿದ್ದು, ರಸ್ತೆಯೆಲ್ಲ ಕೆಸರು ಗದ್ದೆಯಂತಾಗಿತ್ತು. ಇದರಿಂದ ಪಾದಚಾರಿಗಳು ಓಡಾಡಲಾರದಂತಹ ಸ್ಥಿತಿ ನಿರ್ಮಾಣವಾಗಿತ್ತು. ಬಿಬಿಎಂಪಿ ರಸ್ತೆ ದುರಸ್ತಿಗೊಳಿಸುತ್ತದೆ ಎಂದು ಕಾದು ಕಾದು ಸುಸ್ತಾದ ಓನರ್ಸ್ ಕೋರ್ಟ್ ಲೇಔಟ್ ನಿವಾಸಿಗಳು ಚಂದಾ ಎತ್ತಿ ರಸ್ತೆ ದುರಸ್ತಿಗೊಳಿಸಿದ್ದಾರೆ.

ವಿಕ ವಿಶೇಷ

ಕಸವನಹಳ್ಳಿಯ ಓನರ್ಸ್ ಕೋರ್ಟ್ ಲೇಔಟ್‌ನಲ್ಲಿ ಸುಮಾರು 1500ಕ್ಕೂ ಹೆಚ್ಚು ಕುಟುಂಬಗಳಿವೆ. ಎಲ್ಲರೂ ಇದೇ ಮಾರ್ಗದಲ್ಲಿ ಓಡಾಡಬೇಕು. ಆದರೆ, ಕಳೆದ ಒಂದು ವರ್ಷದಿಂದ ರಸ್ತೆ ತುಂಬಾ ಹದಗೆಟ್ಟಿದ್ದು, ಎಲ್ಲೆಂದರಲ್ಲಿ ಗುಂಡಿಗಳು ನಿರ್ಮಾಣವಾಗಿದ್ದವು. ಈ ಬಗ್ಗೆ ಜಲಮಂಡಳಿ ಹಾಗೂ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಮಾಡಿದ್ದರೂ ಯಾವೊಬ್ಬ ಅಧಿಕಾರಿಯೂ ಇತ್ತ ಕಿವಿಗೊಡಲಿಲ್ಲ. ಇನ್ನು ಸ್ಥಳೀಯ ಶಾಸಕರು ಮತ್ತು ಪಾಲಿಕೆ ಸದಸ್ಯರ ಗಮನಕ್ಕೆ ತಂದರೂ ಕ್ಯಾರೇ ಎನ್ನಲಿಲ್ಲ. ಹೀಗಾಗಿ, ಬೇಸತ್ತ ನಿವಾಸಿಗಳು ಹಣ ಸಂಗ್ರಹಿಸಿ ರಸ್ತೆ ಪುನರ್ ನಿರ್ಮಿಸಿದ್ದಾರೆ.

"ಪ್ರತಿ ಬಾರಿ ಮಳೆ ಬಂದಾಗಲೂ ಈ ರಸ್ತೆ ಕೆಸರುಗದ್ದೆಯಂತಾಗುತ್ತಿತ್ತು. ಈ ರಸ್ತೆಯಲ್ಲಿ ದ್ವಿಚಕ್ರ ವಾಹನಗಳಿಂದ ಬಿದ್ದವರ ಸಂಖ್ಯೆಗೆ ಲೆಕ್ಕವೇ ಇಲ್ಲ. ಸದ್ಯ ಕೋವಿಡ್‌ನಿಂದಾಗಿ ಮಕ್ಕಳನ್ನು ಶಾಲೆಗೆ ಕರೆದೊಯ್ಯುವ ಧಾವಂತವಿಲ್ಲ. ಮುಂದಿನ ದಿನಗಳಲ್ಲಿ ಶಾಲೆ-ಕಾಲೇಜು ಪ್ರಾರಂಭವಾಗಲಿದ್ದು, ವಿದ್ಯಾರ್ಥಿಗಳಿಗೂ ಓಡಾಡಲು ಅನುಕೂಲವಾಗಲೆಂದು ರಸ್ತೆಗೆ ಮಣ್ಣು ಹಾಕಿಸಿ, ರೋಡ್ ರೋಲರ್‌ನಿಂದ ರಸ್ತೆ ಸಮತಟ್ಟು ಮಾಡಲಾಗಿದೆ" ಎಂದು ಸ್ಥಳೀಯ ನಿವಾಸಿ ಕುಮಾರ್ ತಿಳಿಸಿದರು.

**ಜನಪ್ರತಿನಿಧಿಗಳ ವಿರುದ್ಧ ಸ್ಥಳೀಯರ ಆಕ್ರೋಶ:** "ರಸ್ತೆಯನ್ನು ದುರಸ್ತಿಗೊಳಿಸುವಂತೆ ಸ್ಥಳೀಯ ಶಾಸಕರು ಹಾಗೂ ಪಾಲಿಕೆ ಸದಸ್ಯರ ಬಳಿ ಸಾಕಷ್ಟು ಬಾರಿ ಮನವಿ ಮಾಡಿಕೊಂಡರೂ ಒಮ್ಮೆಯೂ ಸ್ಪಂದಿಸಲಿಲ್ಲ. ಕೇವಲ ಚುನಾವಣೆ ಸಂದರ್ಭದಲ್ಲಿ ಮತ ಬೇಡಲು ಬರುವ ಈ ರಾಜಕಾರಣಿಗಳು ಗೆದ್ದ ಬಳಿಕ ಜನರ ಸಂಕಷ್ಟಕ್ಕೆ ಕಿವಿಗೊಡುವುದಿಲ್ಲ, ಇಂಥ ನಿರ್ಲಕ್ಷ್ಯದ ಜನಪ್ರತಿನಿಧಿಗಳು ನಮಗೆ ಬೇಡ" ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.







> ರಸ್ತೆ ದುರಸ್ತಿಗೊಳಿಸುವಂತೆ ಮನವಿ ಮಾಡಿದರೆ ಜಲಮಂಡಳಿ ಹಾಗೂ ಬಿಬಿಎಂಪಿ ಪರಸ್ಪರ ಆರೋಪ, ಪ್ರತ್ಯಾರೋಪ ಮಾಡಿಕೊಳ್ಳುವ ಮೂಲಕ ಜಾರಿಕೊಳ್ಳುತ್ತಿವೆ. ಪಾಲಿಕೆ ಸದಸ್ಯರೂ ಸಂಕಷ್ಟಕ್ಕೆ ಸ್ಪಂದಿಸಲಿಲ್ಲ. ಹೀಗಾಗಿ, ಸ್ಥಳೀಯರೇ ಚಂದಾ ಎತ್ತಿ ರಸ್ತೆ ದುರಸ್ತಿಗೊಳಿಸಿದ್ದಾರೆ.
>
> **-ಕಿಶೋರ್** ಓನರ್ಸ್ ಕೋರ್ಟ್ ಲೇಔಟ್ ನಿವಾಸಿ

**ಜಲಮಂಡಳಿ ಹೇಳುವುದೇನು?**

"110 ಹಳ್ಳಿಗಳು ಸೇರಿದಂತೆ ಜಲಮಂಡಳಿಯಿಂದ ಕುಡಿಯುವ ನೀರಿನ ಪೈಪ್ ಮತ್ತು ಯುಜಿಡಿ ಪೈಪ್ ಅಳವಡಿಕೆಗಾಗಿ ಅಗೆದ ರಸ್ತೆಗಳನ್ನು ದುರಸ್ತಿಗೊಳಿಸುವಂತೆ ಬಿಬಿಎಂಪಿಗೆ ಈಗಾಗಲೇ ಹಣ ವರ್ಗಾಯಿಸಲಾಗಿದೆ. ರಸ್ತೆ ದುರಸ್ತಿಪಡಿಸುವುದು ಬಿಬಿಎಂಪಿ ಜವಾಬ್ದಾರಿ. ಇನ್ನು ಜಲಮಂಡಳಿಯಿಂದ ಹಣ ಪಡೆದಿರುವ ಬಿಬಿಎಂಪಿಯೂ ಎಲ್ಲೆಲ್ಲಿ ಕಾಮಗಾರಿ ಪೂರ್ಣಗೊಳಿಸಿದೆ ಎಂಬ ವರದಿಯನ್ನು ನೀಡಿಲ್ಲ" ಎಂದು ಜಲಮಂಡಳಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

VK ವಿಜಯ ಕರ್ನಾಟಕ

| Date | 16-11-2020 |
| --- | --- |
| Page No | 6 |

ಕರ್ನಾಟಕ-ತಮಿಳುನಾಡು ನಡುವೆ ಸಂಪರ್ಕ ಕಲ್ಪಿಸುವ ರಸ್ತೆ ಅವ್ಯವಸ್ಥೆ। ಮರ ಸ್ಥಳಾಂತರಕ್ಕೆ ಅರಣ್ಯ ಇಲಾಖೆ ಮೀನಮೇಷ

# ಚತುಷ್ಪಥ ಕಾಮಗಾರಿ ವಿಳಂಬದಿಂದ ಪರದಾಟ

**ರಸ್ತೆ ತುಂಬ ಹೊಂಡ। ಮಳೆ ಬಂದಾಗ ಕೆಸರಿನ ಕಿರಿಕಿರಿ**



■ **ಸಾಗರ್ ಎಂ.** ಆನೇಕಲ್

ಕರ್ನಾಟಕ-ತಮಿಳುನಾಡು ನಡುವೆ ಸಂಪರ್ಕ ಕಲ್ಪಿಸುವ ಥಳಿ ರಸ್ತೆ ಚತುಷ್ಪಥ ಕಾಮಗಾರಿ ಆಮೆಗತಿಯಲ್ಲಿ ಸಾಗುತ್ತಿದ್ದು, ವಿಳಂಬದಿಂದಾಗಿ ಜನರು ಪರದಾಡುವಂತಾಗಿದೆ.

ಲೋಕೋಪಯೋಗಿ ಇಲಾಖೆಯು ಅಂದಾಜು 12 ಕೋಟಿ ರೂ. ವೆಚ್ಚದಲ್ಲಿ 6.2 ಕಿ.ಮೀ. ಉದ್ದದ ರಸ್ತೆಯನ್ನು ಚತುಷ್ಪಥಗೊಳಿಸುವ ಕಾಮಗಾರಿಯ ಅನುಷ್ಠಾನದ ಹೊಣೆ ಹೊತ್ತುಕೊಂಡಿದೆ. ರಸ್ತೆ ಕಾಮಗಾರಿಯನ್ನು ಟೆಂಡರ್ ಮೂಲಕ ಗುತ್ತಿಗೆದಾರರಿಗೆ ವಹಿಸಲಾಗಿದೆ. ವಿದ್ಯುತ್ ಕಂಬಗಳು ಹಾಗೂ ಮರಗಳ ಸ್ಥಳಾಂತರ ವಿಚಾರದಲ್ಲಿ ಇಲಾಖೆಗಳ ಸಮನ್ವಯ ಕೊರತೆಯಿಂದ ಕಾಮಗಾರಿ ವಿಳಂಬಗೊಂಡಿದೆ.

ಕಾಮಗಾರಿ ಆರಂಭಿಸಿ ಒಂದು ವರ್ಷವೇ ಕಳೆದಿದೆ. ಮಾರ್ಗದುದ್ದಕ್ಕೂ ಅರೆಬರೆ ಕಾಮಗಾರಿ ನಡೆಸಲಾಗಿದೆ. ಆನೇಕಲ್‌ನಿಂದ ಕರ್ನಾಟಕದ ಗಡಿ ಸೋಲೂರಿನವರೆಗೆ ರಸ್ತೆಯನ್ನು ಅಗೆದು ಹಾಗೇ ಬಿಡಲಾಗಿದೆ. ಕಾಳನಾಯಕನ ಹಳ್ಳಿಯಿಂದ ಸೋಲೂರುವರೆಗೆ ರಸ್ತೆಯಲ್ಲಿ ಜಲ್ಲಿಕಲ್ಲು ಹಾಕಲಾಗಿದೆ. ಈ ಭಾಗದಲ್ಲಿ ಭಾರಿ ಗಾತ್ರದ ವಾಹನ ಸಂಚರಿಸುವಾಗ ಧೂಳು ತುಂಬಿ ಇತರ ವಾಹನ ಸವಾರರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಕೆಲವೆಡೆ ಹೊಂಡಗುಂಡಿಗಳು ತುಂಬಿ ಹೋಗಿವೆ. ಮಳೆ ಬಂದರಂತೂ ರಸ್ತೆ ಕೆಸರುಮಯವಾಗಿ ಸಂಚರಿಸುವುದೇ ಕಷ್ಟ ಎಂಬಂತಾಗುತ್ತದೆ. ಆದರಲ್ಲೂ ಹೊಂಡಗಳು ಎಲ್ಲಿವೆ ಎಂದು ಗೊತ್ತಾಗದೆ ದ್ವಿಚಕ್ರ ವಾಹನ ಸವಾರರು ಬಿದ್ದು ಗಾಯಗೊಳ್ಳುವ ಘಟನೆಗಳು ನಡೆಯುತ್ತಿರುತ್ತವೆ.

ಇಲಾಖೆಗಳ ನಡುವೆ ಸಮನ್ವಯ ಸಾಧಿಸಿ, ಕಾಮಗಾರಿಗೆ ವೇಗ ನೀಡುವ ನಿಟ್ಟಿನಲ್ಲಿ ತಾಲೂಕು ಆಡಳಿತ ಗಮನಹರಿಸುತ್ತಿಲ್ಲ.



ವಣಕನಹಳ್ಳಿ ಬಳಿ ರಸ್ತೆಯಲ್ಲಿ ಧೂಳಿನಲ್ಲೇ ಸಂಚರಿಸುತ್ತಿರುವ ವಾಹನಗಳು.

**ಥಳಿ ರಸ್ತೆಯ ಅಕ್ಕಪಕ್ಕದಲ್ಲಿ ಇರುವ ಮರಗಳ ತೆರವಿಗೆ ಅರಣ್ಯ ಇಲಾಖೆ ಅನುಮತಿ ಸಿಗದಿರುವುದು ಕಾಮಗಾರಿ ವಿಳಂಬವಾಗಲು ಕಾರಣವಾಗಿದೆ. ಅಧಿಕಾರಿಗಳ ಜತೆ ಸಭೆ ನಡೆಸಿ, ಕಾಮಗಾರಿ ಚುರುಕುಗೊಳಿಸಲಾಗುವುದು.**

**- ಬಿ.ಶಿವಣ್ಣ** ಶಾಸಕ

**ವಿದ್ಯುತ್ ಕಂಬಗಳನ್ನು ತೆರವು ಮಾಡಲು ಬೆಸ್ಕಾಂ ಅನುಮತಿ ನೀಡಿದೆ. ಅರಣ್ಯ ಇಲಾಖೆ ಮರಗಳ ತೆರವು ಮಾಡದಿರುವುದರಿಂದ ಕಾಮಗಾರಿ ವಿಳಂಬವಾಗುತ್ತಿದೆ.**

**- ಸಿದ್ದೇಶ್ ಪೂಜಾರ್** ಸಹಾಯಕ ಕಾರ್ಯಪಾಲಕ ಅಬಿಯಂತರ, ಲೋಕೋಪಯೋಗಿ ಇಲಾಖೆ

ವಿಜಯವಾಣಿ
ಕನ್ನಡಿಗರ ಧ್ವನಿ

| Date | 16-11-2020 |
|---|---|
| Page No | 4 |


# ಹೊರಮಾವು ರಸ್ತೆಗಳಲ್ಲಿ ವೈಟ್‌ಟಾಪಿಂಗ್ ಕಾಮಗಾರಿ

## ಕಾಮಗಾರಿ ವಿವರ

**ಬಾಬುಸಾಬ್‌ಪಾಳ್ಯ-ಹೊರಮಾವು ಮೇಲ್ಸೇತುವೆ**
ಆರಂಭ: ನ.18
ಮುಕ್ತಾಯ: ಡಿ.26

**ಹೊರಮಾವು ಅಂಡರ್ ಪಾಸ್- ಹೆಬ್ಬಾಳ ರಸ್ತೆ**
ಆರಂಭ: ನ.19
ಮುಕ್ತಾಯ: ಡಿ.2

**ಬಾಬುಸಾಬ್‌ಪಾಳ್ಯ-ಹೆಬ್ಬಾಳ ಮೇಲ್ಸೇತುವೆ**
ಆರಂಭ: ಡಿ.6
ಮುಕ್ತಾಯ: ಡಿ.22

**ಹೊರಮಾವು ಅಂಡರ್ ಪಾಸ್-ರಾಮಮೂರ್ತಿ ನಗರ ರಸ್ತೆ**
ಆರಂಭ: ಡಿ.6
ಮುಕ್ತಾಯ: ಡಿ.22



**ಬೆಂಗಳೂರು:** ರಾಜಧಾನಿಯ ಬಾಬುಸಾಬ್‌ಪಾಳ್ಯದಿಂದ ಹೊರಮಾವು ಸಂಪರ್ಕಿಸುವ ಮೇಲ್ಸೇತುವೆ ಹಾಗೂ ಹೊರಮಾವು ಅಂಡರ್‌ಪಾಸ್ ರಸ್ತೆಗಳಲ್ಲಿ ನ.18ರಂದು ವೈಟ್‌ಟಾಪಿಂಗ್ ಕಾಮಗಾರಿ ಆರಂಭವಾಗಲಿದೆ.

ನಗರದ ವಿವಿಧ ಮುಖ್ಯರಸ್ತೆಗಳಲ್ಲಿ ಬಿಬಿಎಂಪಿ ಈಗಾಗಲೇ 68 ಕಡೆಗಳಲ್ಲಿ ವೈಟ್‌ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಂಡಿದೆ. ಇದರಿಂದ ವಾಹನ ಸಂಚಾರಕ್ಕೂ ಅವಕಾಶವಿಲ್ಲದೆ ತೀವ್ರ ಸಂಕಷ್ಟ ಎದುರಾಗಿದೆ. ಕೇವಲ 5 ನಿಮಿಷದಲ್ಲಿ ತಲುಪಬಹುದಾದ ಮಾರ್ಗವನ್ನು 30 ನಿಮಿಷ ಸವೆಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಕೈಗೆತ್ತಿಕೊಂಡಿರುವ ರಸ್ತೆಗಳ ಕಾಮಗಾರಿ ಗಳನ್ನು ಪೂರ್ಣಗೊಳಿಸುವ ಮುನ್ನವೇ ಹೊಸ ರಸ್ತೆಗಳಲ್ಲಿ ಕೆಲಸ ಆರಂಭಿಸಲಿರುವ ಕಾರಣ ವಾಹನಸವಾರರು ಮತ್ತಷ್ಟು ತೊಂದರೆ ಅನುಭವಿಸುವಂತಾಗಿದೆ.

» **18ಕ್ಕೆ ಆರಂಭ**

» **ಸೇವಾ ರಸ್ತೆಗಳಲ್ಲಿ ಸಂಚಾರಕ್ಕೆ ಅವಕಾಶ**

**ಸರ್ವೀಸ್ ರಸ್ತೆಗಳಲ್ಲಿ ಟ್ರಾಫಿಕ್ ಸಾಧ್ಯತೆ:** ಬಾಬುಸಾಬ್ ಪಾಳ್ಯ- ಹೊರಮಾವು- ಹೆಬ್ಬಾಳ- ರಾಮಮೂರ್ತಿನಗರ ಸಂಪರ್ಕಿಸುವ ಮೇಲ್ಸೇತುವೆ ಮತ್ತು ಅಂಡರ್‌ಪಾಸ್‌ಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಳ್ಳಲಾಗಿರುವ ಹಿನ್ನೆಲೆಯಲ್ಲಿ ಮುಖ್ಯರಸ್ತೆ ಬಂದ್ ಆಗಲಿದೆ. ಆದ್ದರಿಂದ ಸರ್ವೀಸ್ ರಸ್ತೆಗಳಲ್ಲಿ ವಾಹನಸಂಚಾರಕ್ಕೆ ಪೊಲೀಸರು ಅನುಮತಿ ನೀಡಿದ್ದಾರೆ. ನ.18ರಿಂದ ಡಿ. 26ರವರೆಗೆ ಒಂದೂವರೆ ತಿಂಗಳ ಕಾಲ ಸೇವಾ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಉಂಟಾಗುವ ಸಾಧ್ಯತೆಯಿದೆ.

ವಿಜಯವಾಣಿ
ಕನ್ನಡಿಗರ ಧ್ವನಿ

| | |
|---|---|
| Date | 16-11-2020 |
| Page No | 6 |

ವಿಜಯವಾಣಿ ಚಿತ್ರ




ಹಬ್ಬದ ಖರೀದಿಗಾಗಿ ಭಾನುವಾರ ಅವೆನ್ಯೂ ರಸ್ತೆಯಲ್ಲಿ ಸೇರಿದ್ದ ಜನಸ್ತೋಮ.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 16-11-2020 |
| --- | --- |
| Page No | 8 |

## ಕರೊನಾ ಸೋಂಕು ತೀವ್ರತೆ ಇಳಿಮುಖ | ಆಗಸ್ಟ್‌ನಲ್ಲೇ ಮಾರ್ಗಸೂಚಿ ಬದಲು

# ನಗರದಲ್ಲಿ ಕೇವಲ 2 ಸಕ್ರಿಯ ಕಂಟೇನ್ಮೆಂಟ್

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ನಗರದಲ್ಲಿ ಕರೊನಾ ಸೋಂಕಿತರ ಒಟ್ಟು ಸಂಖ್ಯೆ 3.56 ಲಕ್ಷ ದಾಟಿದ್ದರೂ, ಸಕ್ರಿಯ ಕಂಟೇನ್ಮೆಂಟ್ ವಲಯಗಳ ಸಂಖ್ಯೆ ಕೇವಲ 2ಕ್ಕೆ ಇಳಿಕೆಯಾಗಿದೆ. ಇದರಿಂದ ವ್ಯಾಪಾರ ವಹಿವಾಟು, ಜನಸಂಚಾರ ಸೇರಿ ಎಲ್ಲ ಕಾರ್ಯಕ್ಕೂ ಮುಕ್ತ ಅವಕಾಶ ಲಭ್ಯವಾದಂತಾಗಿದೆ.

**» ಸಾಮಾನ್ಯ ಪ್ರದೇಶಗಳಾಗಿ ಬದಲಾಗುತ್ತಿವೆ ಕಂಟೇನ್ಮೆಂಟ್ ಪ್ರದೇಶ**

ಜುಲೈ ಮತ್ತು ಆಗಸ್ಟ್‌ನಲ್ಲಿ ಕರೊನಾ ಹರಡುವಿಕೆ ಪ್ರಮಾಣ ತೀವ್ರ ಹೆಚ್ಚಳವಾಗಿತ್ತು. ಆಗ ಸೋಂಕಿತರು ಪತ್ತೆಯಾದ ಪ್ರತಿಮನೆಯನ್ನೂ ಕಂಟೇನ್ಮೆಂಟ್ ಪ್ರದೇಶ ಎಂದು ಗುರುತಿಸಿ ಸುತ್ತ 100 ಮೀಟರ್ ವ್ಯಾಪ್ತಿಯಲ್ಲಿ ಜನಸಂಚಾರ ನಿರ್ಬಂಧಿಸಲಾಗುತ್ತಿತ್ತು. ಆಗ (ಆ.20ಕ್ಕೆ ಮುನ್ನ) ಬಿಬಿಎಂಪಿ ವ್ಯಾಪ್ತಿಯಲ್ಲಿ 36 ಸಾವಿರಕ್ಕೂ ಅಧಿಕ ಕಂಟೇನ್ಮೆಂಟ್ ಪ್ರದೇಶಗಳಿದ್ದವು. ಪ್ರತಿ ವಾರ್ಡ್‌ನಲ್ಲೂ 3ರಿಂದ 5 ರಸ್ತೆಗಳನ್ನು ಬಂದ್ ಮಾಡಿರುವ ದೃಶ್ಯಗಳು ಸಾಮಾನ್ಯವಾಗಿದ್ದವು. ಮಾರ್ಗಸೂಚಿ ಬದಲಾವಣೆಯಿಂದಾಗಿ ಕಂಟೇನ್ಮೆಂಟ್ ಪ್ರದೇಶಗಳ ಸಂಖ್ಯೆ ಕೇವಲ ಎರಡಕ್ಕೆ ಇಳಿಕೆಯಾಗಿದೆ. ಇವೆರಡೂ ಮಹದೇವಪುರ ವಲಯದಲ್ಲಿವೆ.

### ಪ್ರಸ್ತುತ ಮಾರ್ಗಸೂಚಿಗಳೇನು?

**100 ಮೀಟರ್ ವ್ಯಾಪ್ತಿಯಲ್ಲಿ 20ಕ್ಕಿಂತ ಅಧಿಕ ಕರೊನಾ ಸೋಂಕಿತ ಪ್ರಕರಣಗಳು ಕಂಡುಬಂದಲ್ಲಿ ಮಾತ್ರ ಕಂಟೇನ್ಮೆಂಟ್ ಎಂದು ಪರಿಗಣಿಸಲಾಗುತ್ತಿದೆ. ಒಬ್ಬ ಅಥವಾ 20ಕ್ಕಿಂತ ಕಡಿಮೆ ಸೋಂಕಿತರು ಕಂಡುಬಂದಲ್ಲಿ ಆಯಾ ಮನೆಗೆ ಮಾತ್ರ ಚಿಕ್ಕ ಭಿತ್ತಿಪತ್ರ ಅಂಟಿಸಲಾಗುತ್ತಿದೆ. ಬಿಬಿಎಂಪಿ ಆರೋಗ್ಯ ಸಿಬ್ಬಂದಿ ಭೇಟಿ ಮಾಡಿ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕ ಹೊಂದಿದವರ ಕ್ವಾರಂಟೈನ್ ಮಾಡುತ್ತಾರೆ.**




**ಮಹದೇವಪುರದಲ್ಲಿ ಕಂಟೇನ್ಮೆಂಟ್:** ಆ.21ರಿಂದ ಈವರೆಗೆ 37 ಕಂಟೇನ್ಮೆಂಟ್ ಪ್ರದೇಶಗಳನ್ನು ಗುರುತಿಸಲಾಗಿದೆ. ಪಶ್ಚಿಮ ವಲಯದಲ್ಲಿ 9, ಮಹದೇವಪುರ 9, ಬೆಂಗಳೂರು ಪೂರ್ವ 5, ದಾಸರಹಳ್ಳಿ 7, ಯಲಹಂಕ 2, ಬೆಂಗಳೂರು ದಕ್ಷಿಣ 1, ಆರ್.ಆರ್. ನಗರ 1 ಹಾಗೂ ಬೊಮ್ಮನಹಳ್ಳಿ ವಲಯದಲ್ಲಿ ಇದ್ದ 1 ಕಂಟೇನ್ಮೆಂಟ್ ಪ್ರದೇಶಗಳನ್ನು ಸಾಮಾನ್ಯ ಪ್ರದೇಶಗಳಾಗಿ ಮಾರ್ಪಡಿಸಲಾಗಿದೆ. ಮಹದೇವಪುರದಲ್ಲಿನ 2 ಸಕ್ರಿಯ ಪ್ರದೇಶಗಳು ಉಳಿದುಕೊಂಡಿವೆ.

**ಆರ್ಥಿಕತೆ ಚೇತರಿಕೆ:** ಕರೊನಾ ಹರಡುವುದನ್ನು ತಡೆಗಟ್ಟಲು ಲಾಕ್‌ಡೌನ್, ಕಂಟೇನ್ಮೆಂಟ್ ಜೋನ್, ಕ್ವಾರಂಟೈನ್, ಹೋಂ ಐಸೋಲೇಷನ್, ಕೋವಿಡ್ ಕೇರ್ ಸೆಂಟರ್ ಇತ್ಯಾದಿ ಕ್ರಮಗಳನ್ನು ಜಾರಿಗೊಳಿಸಲಾಗಿತ್ತು. ಪ್ರಸ್ತುತ, ಸೋಂಕಿತರ ಖಚಿತ ಪ್ರಮಾಣ ಶೇ.3ಕ್ಕಿಂತ ಕಡಿಮೆಯಾಗಿದೆ. ಪರಿಣಾಮ, ಎಲ್ಲೆಡೆ ಕೋವಿಡ್ ನಿಯಮಾವಳಿ ಪಾಲನೆಯೊಂದಿಗೆ ವ್ಯಾಪಾರ ವಹಿವಾಟು ನಡೆದಿದೆ. ಜನಸಂಚಾರವೂ ಹಳೇ ಲಯಕ್ಕೆ ಮರಳಿದ್ದರಿಂದ ಆರ್ಥಿಕ ಚೇತರಿಕೆ ಕಾಣಿಸಿಕೊಳ್ಳುತ್ತಿದೆ.

ವಿಜಯವಾಣಿ
ಕನ್ನಡಿಗರ ಧ್ವನಿ

| Date | 16-11-2020 |
|---|---|
| Page No | 8 |

# ದೀಪಾವಳಿ ಸಂಭ್ರಮ ತಗ್ಗಿಸಿದ ಮಳೆ



ವಿಜಯವಾಣಿ ಚಿತ್ರ

ಮೈಸೂರು ರಸ್ತೆಯಲ್ಲಿ ಭಾನುವಾರ ಸಂಜೆ ಸುರಿವ ಮಳೆಯಲ್ಲಿಯೇ ಸಾಗುತ್ತಿರುವ ವಾಹನಗಳು.

**ಬೆಂಗಳೂರು:** ಬಂಗಾಳಕೊಲ್ಲಿಯಲ್ಲಿ ಉಂಟಾದ ಮೇಲ್ಮೈ ಸುಳಿಗಾಳಿ ಪರಿಣಾಮವಾಗಿ ನಗರದಲ್ಲಿ ಭಾನುವಾರ ಸಂಜೆ ಮಳೆಯಾಗಿದ್ದು, ವಾಹನ ಸವಾರರು ಪರದಾಡುವಂತಾಯಿತು.

**» ಮೇಲ್ಮೈ ಸುಳಿಗಾಳಿ ಪರಿಣಾಮ ಚಳಿ ವಾತಾವರಣ**

ಕಳೆದ ಎರಡು ದಿನಗಳಿಂದ ಮೋಡ ಕವಿದ ವಾತಾವರಣ ಉಂಟಾಗಿದ್ದು, ಶೀತಗಾಳಿ ಬೀಸುತ್ತಿದೆ. ಭಾನುವಾರವೂ ಬೆಳಗ್ಗೆಯಿಂದ ಮೋಡ ಕವಿದಿದ್ದು, ಹನಿ ಸುರಿಯುತ್ತಿತ್ತು. ಸಂಜೆ 5ರ ವೇಳೆಗೆ ಮಲ್ಲೇಶ್ವರ, ಮೆಜೆಸ್ಟಿಕ್, ಕೃ.ರಾ. ಮಾರುಕಟ್ಟೆ, ಚಾಮರಾಜಪೇಟೆ, ರಾಜಾಜಿನಗರ, ಬಸವನಗುಡಿ, ಕೆ.ಆರ್. ಪುರ ಹಾಗೂ ಯಶವಂತಪುರ ಮುಂತಾದೆಡೆ ಮಳೆ ಸುರಿಯಿತು. ಮಳೆಯಿಂದಾಗಿ ಹಲವು ರಸ್ತೆಗಳಲ್ಲಿ ಟ್ರಾಫಿಕ್ ಸಮಸ್ಯೆ ಎದುರಾಯಿತು.

## ನಾಲ್ಕು ದಿನ ಮಳೆ ಸಾಧ್ಯತೆ

**ಬಂಗಾಳ ಕೊಲ್ಲಿಯಲ್ಲಿ ಬೀಸಿದ ಮೇಲ್ಮೈ ಸುಳಿಗಾಳಿ ಪರಿಣಾಮ ರಾಜ್ಯದ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮುಂದಿನ 4 ದಿನ ಮಳೆ ಸುರಿಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.**

**ಪಟಾಕಿ ಸಿಡಿಸಲು ಅಡ್ಡಿ:** ದೀಪಾವಳಿ ಅಂಗವಾಗಿ ಸಂಜೆ ವೇಳೆ ದೀಪಗಳನ್ನು ಹಚ್ಚಿ ಪಟಾಕಿ ಸಿಡಿಸಬೇಕು ಎಂದುಕೊಂಡಿದ್ದ ಮಕ್ಕಳಿಗೆ ಮಳೆ ಅಡ್ಡಿ ಉಂಟುಮಾಡಿತು. ವಿವಿಧ ಮೈದಾನಗಳಲ್ಲಿ ಪಟಾಕಿ ಮಾರಾಟ ಮಳಿಗೆಗಳ ವ್ಯಾಪಾರಕ್ಕೂ ತೊಂದರೆ ಉಂಟಾಯಿತು. ರಾತ್ರಿ 7 ಗಂಟೆ ನಂತರ ಮಳೆ ನಿಂತಿದ್ದರಿಂದ ಮತ್ತೆ ಪಟಾಕಿ ಸದ್ದು ಕೇಳಿಬಂದಿತು.

ವಿಶ್ವವಾಣಿ

| Date | 16-11-2020 |
| --- | --- |
| Page No | 3 |

### ಹೆಚ್ಚಿದ ಪಟಾಕಿ ದರ ಖರೀದಿಗೆ ಹೆಚ್ಚು ಆಸಕ್ತಿ ತೋರದ ಜನರು

# ಬೆಂಗಳೂರು ಜನರಲ್ಲಿ ಕುಂದದ ಪಟಾಕಿ ಕ್ರೇಜ್

ಅಪರ್ಣಾ ಎ.ಎಸ್ ಬೆಂಗಳೂರು

ಕರೋನಾ ಹಬ್ಬುವುದನ್ನು ತಡೆಯುವ ನಿಟ್ಟಿನಲ್ಲಿ ರಾಜ್ಯ ಸರಕಾರ ಪಟಾಕಿ ಹೊಡೆಯುವುದನ್ನು ನಿಷೇಧಿಸಿ, ಕೇವಲ ಹಸಿರು ಪಟಾಕಿಗೆ ಅವಕಾಶ ನೀಡಿದರೂ, ಪಟಾಕಿ ಹೊಡೆಯುವವರ ಸಂಖ್ಯೆ ರಾಜ್ಯದಲ್ಲಿ ಗಣನೀಯ ಇಳಿಕೆ ಕಂಡಿದ್ದರೂ, ರಾಜಧಾನಿ ಬೆಂಗಳೂರಿನಲ್ಲಿ ಮಾತ್ರ ಕ್ರೇಜ್ ಕಡಿಮೆಯಾಗಿಲ್ಲ.

ರಾಜ್ಯ ಸರಕಾರ ಹಾನಿಕಾರಕ ಪಟಾಕಿಯನ್ನು ನಿಷೇಧಿಸಿದ್ದರೂ ಹಸಿರು ಪಟಾಕಿಗಳ ಮೂಲಕ ದೀಪಾವಳಿ ಸಂಭ್ರಮಾಚರಣೆಗೆ ಅನುಮತಿಯನ್ನು ನೀಡಿದೆ. ರಾಜ್ಯದ ಹಲವೆಡೆ ಸುರಕ್ಷತೆ ಹಾಗೂ ಆರೋಗ್ಯದ ದೃಷ್ಟಿಯಿಂದ ಪಟಾಕಿ ಖರೀದಿಯಲ್ಲಿ ಜನ ಹಿಂದೇಟು ಹಾಕಿದ್ದರೂ ರಾಜ್ಯ ರಾಜಧಾನಿಯ ಹಲವೆಡೆ ಜನರು ಪಟಾಕಿಕೊಳ್ಳುವಲ್ಲಿ ಹಿಂದೆ ಬಿದ್ದಿಲ್ಲ, ಕಳೆದ 3 ವರ್ಷಗಳಿಂದ ಪಟಾಕಿ ಮಾರಾಟ ಇಳಿಕೆ ಕಂಡಿದೆ. ಈ ವರ್ಷ ಕೋವಿಡ್-19 ಬಳಿಕ ಪರಿಸರ ಹಾಗೂ ಆರೋಗ್ಯದ ದೃಷ್ಟಿಯಿಂದ ಕಾಳಜಿ ಮತ್ತಷ್ಟು ಹೆಚ್ಚಾಗಿರುವುದರಿಂದ ಭಾರೀ ಸಂಖ್ಯೆಯಲ್ಲಿ ಜನ ಪಟಾಕಿಯಿಂದ ದೂರ ಉಳಿಯುತ್ತಿದ್ದಾರೆ.

**ಶೇ. 50ರಷ್ಟು ವ್ಯಾಪಾರ:** ವ್ಯಾಪಾರಿಗಳ ಪ್ರಕಾರ ಕಳೆದ ಬಾರಿಯಾಗಿದ್ದ ವ್ಯಾಪಾರದ ಶೇ.50ರಷ್ಟು ವ್ಯಾಪಾರವೂ ಈ ಬಾರಿಯಾಗಿಲ್ಲ, ಪಟಾಕಿ ಬಳಕೆಯ ಸಮಯ, ಮಾರಾಟ ಸಂಬಂಧಿಸಿದಂತೆ ಕೊನೆ ಕ್ಷಣದವರೆಗಿನ ಗೊಂದಲ ಹಾಗೂ ಕಡಿಮೆ ಮಾಲಿನ್ಯಕಾರಕ ಹಸಿರು ಪಟಾಕಿಗಳ ತಯಾರಿಕೆಗೆ ಹೆಚ್ಚು ಗಮನಕೊಡಲಾ ಗುತ್ತಿದ್ದು, ಇದಕ್ಕೆ ಸಂಬಂಧಿಸಿದಂತೆ ದರವೂ ಜಾಸ್ತಿ ಯಾಗಿದೆ. ಶೇ.60ರಷ್ಟು ಮಾರಾಟದ ಟೆಂಡರ್ ಕುಸಿತವನ್ನು ಕಂಡಿದೆ. ಶನಿವಾರ ಮಾರಾಟ ದಲ್ಲಿ ಚೇತರಿಕೆ ಕಂಡರೂ ಸರಾಸರಿ ಶೇ.50 ರಷ್ಟು ಇಳಿಕೆ ಯಾಗುವ ಅಂದಾಜನ್ನೂ ಕಾಣಬಹುದಾಗಿದೆ. ಈ ಹಿಂದೆ ಕೇವಲ ಬೆಂಗಳೂರಿನಲ್ಲೇ 50 ಕೋಟಿ.ರು ಗೂ ಹೆಚ್ಚಿದ ಪಟಾಕಿ ವ್ಯಾಪಾರವಾಗುತ್ತಿತ್ತು, ಈ ಬಾರಿ 20 ಕೋಟಿ ರು ವಹಿವಾಟು ಮಾತ್ರ ನಡೆದಿದೆ ಇದೇ ಪರಿಸ್ಥಿತಿ ರಾಜ್ಯಾದ್ಯಂತ ಇದೆ ಎನ್ನಲಾಗಿದೆ.

**ಅವಕಾಶ ನೀಡದ ಅಧಿಕಾರಿಗಳು:** ಪಟಾಕಿ ಮಾರಾಟ ಮಾಡಲು ಈ ಹಿಂದೆ ಸುಮಾರು ಏಳೆಂಟು ದಿನಗಳ ಕಾಲ ಅನುಮತಿ ನೀಡಲಾಗುತ್ತಿತ್ತು. ಆದರೆ ಈ ಬಾರಿ ಕೇವಲ ಮೂರು ದಿನ ಮಾತ್ರ ಅವಕಾಶ ನೀಡಲಾಗಿದೆ. ಮೂರು ದಿನಕ್ಕೆ 10 ಸಾವಿರ ರು. ಬಾಡಿಗೆ ನಿಗದಿ ಮಾಡಲಾಗಿದೆ. ಅಲ್ಲದೇ ಅಗ್ನಿಶಾಮಕ ಠಾಣೆ, ಜಿಲ್ಲಾಧಿಕಾರಿ ಕಚೇರಿ, ಮಾಲಿನ್ಯ ನಿಯಂತ್ರಣ ಮಂಡಳಿ ಇಲಾಖೆ ಅಧಿಕಾರಿಗಳ ಅನುಮತಿ ಪಡೆಯಲು ಶುಲ್ಕ ಪಾವತಿಸಬೇಕು. ಇದರಿಂದಾಗಿ ಈ ಬಾರಿ ಮಾರಾಟಕ್ಕೆ ತಂದಿರುವ ಪಟಾಕಿ ದಾಸ್ತಾನು ಖಾಲಿಯಾಗುವುದು ಅನುಮಾನ. ಒಟ್ಟಿನಲ್ಲಿ ಈ ಬಾರಿ ದೀಪಾವಳಿ ಹಬ್ಬದ ಪಟಾಕಿ ವ್ಯಾಪಾರಕ್ಕೆ ಗ್ರಾಹಕರು ಆಸಕ್ತಿ ವಹಿಸುತ್ತಿಲ್ಲ, ಪಟಾಕಿ ಖರೀದಿಗೆ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂಬುದು ಪಟಾಕಿ ವ್ಯಾಪಾರಸ್ಥರ ಅಳಲು.



ದೀಪಾವಳಿಯ ಸಂಭ್ರಮದಲ್ಲಿ ತೊಡಗಿರುವ ಕೆಂಗೇರಿ ಬಡಾವಣೆಯ ಜನತೆ.

ಉದಯವಾಣಿ
ಜನಮನದ ಜೀವನಾಡಿ

| Date | 16-11-2020 |
|---|---|
| Page No | 2 |

ನಗರದ ವಿವಿಧೆಡೆ ಖರೀದಿ ಭರಾಟೆ | ಹೂವು, ಹಣ್ಣು, ತರಕಾರಿ ಬೆಲೆ ಏರಿಕೆ

# ರಾಜಧಾನಿಯ ಮಾರುಕಟ್ಟೆಗಳಲ್ಲಿ ದೀಪಾವಳಿ ರಂಗು

**ಬೆಂಗಳೂರು:** ನಗರದ ಮಾರುಕಟ್ಟೆಗಳಲ್ಲಿ ಭಾನುವಾರವೂ ದೀಪಾವಳಿ ಹಬ್ಬದ ಖರೀದಿ ಕಳೆ ಕಂಡು ಬಂತು. ಬನಶಂಕರಿ, ಜಯನಗರ, ಮಲ್ಲೇಶ್ವರ, ಯಶವಂತಪುರ, ಕೆ.ಆರ್.ಪುರ, ಕಲಾಸಿಪಾಳ್ಯ, ಗಾಂಧೀ ಬಜಾರ್ ಸೇರಿದಂತೆ ಇನ್ನಿತರ ಮಾರುಕಟ್ಟೆಗಳಲ್ಲಿ ಜನರು ಖರೀದಿ ಪ್ರಕ್ರಿಯೆಲ್ಲಿ ತೊಡಗಿದ್ದರು. ಕೆ.ಆರ್.ಮಾರುಕಟ್ಟೆಯಲ್ಲಿ ಕೊರೊನಾ ಮಾರ್ಗಸೂಚಿಗಳನ್ನು ಮರೆತು ಗ್ರಾಹಕರು ಖರೀದಿಯಲ್ಲಿ ತೊಡಗಿದ್ದು ಕಂಡು ಬಂತು.

ಹಬ್ಬದ ಹಿನ್ನೆಲೆಯಲ್ಲಿ ಕೆಲವು ಹೂವುಗಳ ಬೆಲೆಯಲ್ಲಿ ಅಲ್ಪ ಪ್ರಮಾಣದ ಬೇಡಿಕೆ ಕಂಡು ಬಂದಿದೆ. ಕನಕಾಂಬರ ಹೂವು ಕೆ.ಜಿ ಗೆ 1600 ರೂ. ದಿಂದ 1800 ರೂ. ವರೆಗೂ ಮಾರಾಟವಾಯಿತು. ಹಾಗೆಯೇ ಉತ್ತಮ ಗುಣಮಟ್ಟದ ಮಲ್ಲಿಗೆ ಹೂವು 1500 ರಿಂದ 1600 ರೂ. ವರೆಗೆ ಖರೀದಿ ಆಯಿತು. ಸುಗಂಧರಾಜ ಬಿಡಿ ಹೂವು ಕೆ.ಜಿ. 40 ರಿಂದ 80 ರೂ. ಸೇವಂತಿಗೆ ಬಿಡಿ ಹೂವು 80 ರೂ. ಕೆಂಪು ಗುಲಾಬಿ 80 ರೂ.ಗೆ ಗ್ರಾಹಕರು ಖರೀದಿಸಿದರು.

ಹಾಗೆಯೇ ಬಿಡಿ ಚೆಂಡು ಹೂವು ಕೆ.ಜಿ.50 ರೂ. ಮಲ್ಲಿಗೆ ದಿಂಡು 50 ರೂ.ಕನಕಾಂಬರ ಹೂವು ಮಾರಿಗೆ 120 ರೂ.ಗೆ ಮಾರಾಟವಾಯಿತು. ಸೇವಂತಿಗೆ ಹೂವು ಮಾರಿಗೆ 60 ರೂ. ಸೇವಂತಿಗೆ ಹಾರ 50ರೂ. ಸುಗಂಧರಾಜ ಹಾರ 60-70ರೂ.ಗೆ ಖರೀದಿಯಾಯಿತು. ಜೋಡಿ ಕಬ್ಬು 120 ರೂ.ಬಾಳೆ 80ರೂ.ಗೆ ಮಾರಾಟವಾಯಿತು.

ಕಳೆದ ಬಾರಿಗೆ ಹೋಲಿಕೆ ಮಾಡಿ ನೋಡಿದಾಗ ಈ ಸಲ ಅಷ್ಟೊಂದು ಪ್ರಮಾಣದ ವ್ಯಾಪಾರ ಇಲ್ಲ, ಆದರೆ ಅನ್‌ಲಾಕ್ ನಂತರ ದಿನಗಳಿಗೆ ಹೋಲಿಕೆ ಮಾಡಿ ನೋಡಿದರೆ ಕಳೆದೆರಡು ದಿನಗಳಿಂದ ಉತ್ತಮವಾಗಿ ಹೂವಿನ ವ್ಯಾಪಾರ ನಡೆದಿದೆ ಎಂದು ಹೂವಿನ ವ್ಯಾಪಾರಿ ಪೆರುಮಾಳ್ ಹೇಳಿದರು.



ಕೆ.ಆರ್. ಮಾರುಕಟ್ಟೆಯಲ್ಲಿ ಹಣ್ಣು- ತರಕಾರಿ ವ್ಯಾಪಾರದ ಬಿರುಸು.

ಹಾಗೆಯೇ ಸೇಬು ಹಣ್ಣು ಕೆ.ಜಿ ಗೆ 80-100 ರೂ.ಕಿತ್ತಳೆ 60 ರೂ. ಮೊಸಂಬಿ 100 ರೂ. ಏಲಕ್ಕಿ ಬಾಳೆ ಹಣ್ಣು 40ರೂ.ಗೆ ಖರೀದಿ ಆಯಿತು. ಹಾಗೆ ಬೀನ್ಸ್ , ಬೆಂಡೆ ಕಾಯಿ ಕೆ.ಜಿ. 20 ರೂ, ಈರುಳ್ಳಿ ಕೆ.ಜಿ. 60 ರೂ ಗೆ ಮಾರಾಟವಾಯಿತು. ದಸರಾಕ್ಕೆ ಹೋಲಿಕೆ ಮಾಡಿದಾಗ ಈಗ ತರಕಾರಿ ಬೆಲೆಯಲ್ಲಿ ಇಳಿಕೆಯಾಗಿದೆ ಎಂದು ಕಲಾಸಿಪಾಳ್ಯ ಹಣ್ಣು - ತರಕಾರಿ ಸಗಟು ಮಾರಾಟಗಾರರ ಸಂಘದ ಅಧ್ಯಕ್ಷ ಆರ್.ವಿ.ಗೋಪಿ ಹೇಳಿದರು.

**ಭಿನ್ನ ಶೈಲಿಯ ಹಣತೆ ಖರೀದಿ:** ಈಗಾಗಲೇ ಮಾರುಕಟ್ಟೆಯಲ್ಲಿ ಭಿನ್ನಶೈಲಿಯ ವಿವಿಧ ರೀತಿಯ ಹಣತೆಗಳು ಲಭ್ಯವಿವೆ. ಕುಬೇರ ದೀಪ,ಲಕ್ಷ್ಮೀ ದೀಪ, ಗೌರಿ-ಗಣೇಶ ದೀಪ, ಪಂಚಮುಖ ದೀಪ ಸೇರಿದಂತೆ ಹಲವು ಶೈಲಿಯ ದೇಶಿಯ ಹಣತೆಗಳು ಮಾರುಕಟ್ಟೆಯಲ್ಲಿ ದೊರೆಯುತ್ತಿವೆ. ದೀಪಾವಳಿ ಮತ್ತು ಕಾರ್ತಿಕ ಮಾಸದ ಹಿನ್ನೆಲೆಯಲ್ಲಿ ಮಹಿಳೆಯರು ಹಣತೆ ಖರೀದಿಸಿದರು.

### ಹಾಪ್ ಕಾಮ್ಸ್‌ನಲ್ಲಿ ಹಣ್ಣು-ತರಕಾರಿ ದರ (ಕೆ.ಜಿ)

| | |
|---|---|
| ಏಲಕ್ಕಿ ಬಾಳೆ | 69 ರೂ. |
| ನುಗ್ಗೆಕಾಯಿ | 104 ರೂ. |
| ಡಬ್ಬಲ್ ಬೀನ್ಸ್ | 56 ರೂ. |
| ಟೊಮೆಟೋ | 24 ರೂ. |
| ಈರುಳ್ಳಿ | 78 ರೂ. |
| ಈರುಳ್ಳಿ ಹೂವು | 47 ರೂ. |
| ನವಿಲು ಕೋಸು | 30 ರೂ. |
| ಹರಿವೆ ಸೊಪ್ಪು | 40 ರೂ. |
| ಚಪ್ಪರದ ಅವರೆ | 64 ರೂ. |
| ಅಲಸಂದೆ ಕಾಯಿ | 32 ರೂ. |
| ಬಸಳೆ ಸೊಪ್ಪು | 38 ರೂ. |

ಕಳೆದ ಎರಡ್ಮೂರು ದಿನಗಳಲ್ಲಿ ಹೂವಿನ ವ್ಯಾಪಾರ ಉತ್ತಮವಾಗಿ ನಡೆಯಿತು. ಗ್ರಾಹಕರು ಕೂಡ ಹಬ್ಬದ ಹಿನ್ನೆಲೆಯಲ್ಲಿ ಹಲವು ರೀತಿಯ ಹೂವುಗಳನ್ನು ಖರೀದಿಸಿದರು. ಅನ್ ಲಾಕ್ ನಂತರ ಹೂವಿನ ವ್ಯಾಪಾರದಲ್ಲಿ ಚೇತರಿಕೆ ಕಂಡು ಬಂದಿದೆ.

• ಮಂಜುನಾಥ್ ,
ಹೂವಿನ ವ್ಯಾಪಾರಿ ಕೆ.ಆರ್.ಮಾರುಕಟ್ಟೆ

ಉದಯವಾಣಿ
ಜನಮನದ ಜೀವನಾಡಿ

| Date | 16-11-2020 |
| --- | --- |
| Page No | 3 |



ಉದಯವಾಣಿ
ಜನಮನದ ಜೀವನಾಡಿ

| Date | 16-11-2020 |
|---|---|
| Page No | 4 |

# ಪಾದಚಾರಿಗಳಿಗೆ ನಿತ್ಯ ನರಕಯಾತನೆ

**ಚಂದಾಪುರ:** ಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರದ ಸಿಂಗಸಂದ್ರ ವಾರ್ಡ್ ಮುಖ್ಯ ರಸ್ತೆಯ ಪಕ್ಕದಲ್ಲಿ ಕಳೆದ ಎರಡು ತಿಂಗಳಿನಿಂದ ಒಳಚರಂಡಿ ನೀರು ರಸ್ತೆ ಮೇಲೆ ಹರಿಯುತ್ತಿದ್ದು, ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿಯೇ ಒಳಚರಂಡಿ ಅವ್ಯವಸ್ಥೆಯು ಎದ್ದು ಕಾಣುತ್ತಿದ್ದು, ಪ್ರತಿ ದಿನ ಓಡಾಡುವ ಸಾರ್ವಜನಿಕರಿಗೆ ಮತ್ತು ವಾಹನ ಸವಾರರಿಗೆ ದುರ್ನಾತದಿಂದ ಮೂಗು ಮುಚ್ಚಿಕೊಂಡು ಓಡಾಡುವ ಸ್ಥಿತಿ ನಿರ್ಮಾಣವಾಗಿದೆ. ಕೊಳಚೆ ನೀರು ವಾರ್ಡಿನ ಮುಖ್ಯ ರಸ್ತೆಯಿಂದ ಆಯ್ದುಕೊಂಡು ರಾಷ್ಟ್ರೀಯ ಹೆದ್ದಾರಿಯಲ್ಲಿ ಕಾಲುವೆಯಂತೆ ಹರಿಯುತ್ತಿದೆ. ಇದನ್ನು ಕಂಡರೂ ಕಾಣದಂತೆ ಬಿಬಿಎಂಪಿ ಅಧಿಕಾರಿಗಳು ಜಾಣ ಮೌನ ವಹಿಸಿದ್ದಾರೆ. ಇದರ ನಿಯಂತ್ರಣ ಮತ್ತು ನಿವಾರಣೆಗಾಗಿ ಸ್ಥಳೀಯ ಬಿಬಿಎಂಪಿ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಪ್ರಯೋಜನವಾಗಿಲ್ಲ, ಸಮಸ್ಯೆಯನ್ನು ಬಗೆಹರಿಸಿ ಕೊಡದಿದ್ದಲ್ಲಿ, ಬಿಬಿಎಂಪಿ ವಿರುದ್ಧ ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ದಲಿತ್ ಪ್ಯಾಂತರ್ಸ್ ಆಪ್ ಇಂಡಿಯಾ ಸಂಚಾಲಕ ಡಿಪಿಐ ಸಂತೋಷ್ ಆಕ್ರೋಶ ವ್ಯಕ್ತ ಪಡಿಸಿದರು.

**ಅಧಿಕಾರಿಗಳ ನಿರ್ಲಕ್ಷ್ಯ:** ಬಿಬಿಎಂಪಿ ಹಾಗೂ ಪಿಡಬ್ಲ್ಯುಎಸ್ ಎಸ್‌ಬಿ ಅಧಿಕಾರಿಗಳು ನಿರ್ಲಕ್ಷ್ಯ ತೋರುವುದರ ಜತೆಗೆ ಸ್ಥಳಿಯರು ಫೋನ್ ಮಾಡಿ ಈ ಸಮಸ್ಯೆಯ ಬಗ್ಗೆ ಹೇಳಿದರೆ ಅಧಿಕಾರಿಗಳು ಅದು ನಮಗೆ ಬರೋಲ್ಲ , ಅವರಿಗೆ ಇವರಿಗೆ ಬರುತ್ತದೆ ಎಂಬುದಾಗಿ ಕುಂಟು ನೆಪ ಹೇಳುತ್ತಾರೆ. ಇನ್ನೂ ಒತ್ತಾಯ ಮಾಡಿದರೆ ಆಯ್ತು ಬಿಡ್ರಿ ಮಾಡೋಣ ಅದೇನು ದೊಡ್ಡ ಸಮಸ್ಯೆ ಅಲ್ಲ ಅಂತ ಉಡಾಫೆ ಉತ್ತರ ನೀಡುತ್ತಾರೆ ಎಂಬುದಾಗಿ ಸ್ಥಳೀಯ ನಾಗರಿಕರು ಅಳಲು ತೋಡಿಕೊಳ್ಳುತ್ತಾರೆ.



ರಸ್ತೆಗೆ ಹರಿಯುತ್ತಿರುವ ಕೊಳಚೆ ನೀರು.

## ಜನಪ್ರತಿನಿಧಿಗಳ ಜಾಣ ಕುರುಡು

1ನೇ ಮುಖ್ಯ ರಸ್ತೆಯ ಜನರು ಯಾವ ಪಾಪಮಾಡಿದ್ದಾರೆ ಗೊತ್ತಿಲ್ಲ, ಒಳಚರಂಡಿಯ ನೀರು ಸರಿಯಾಗಿ ಹರಿದುಹೋಗಲು ಸೂಕ್ತ ವ್ಯವಸ್ಥೆ ಮಾಡಿಲ್ಲ, ಸಾನೇಟರಿ ಚೇಂಬರ್ ಒಡೆದು ಹೋಗಿ ಎಷ್ಟೋ ತಿಂಗಳು ಕಳೆದಿವೆ, ಮಲಮೂತ್ರಗಳ ನೀರು ಮಳೆಯ ನೀರಿನಲ್ಲಿ ಬೆರೆತು ಕೆಲವು ಮನೆಗಳಿಗೂ ಹರಿಯುತ್ತಿದೆ. ಜನಪ್ರತಿನಿಧಿಗಳು ಕುರುಡರಂತೆ ವರ್ತಿಸುತ್ತಿದ್ದಾರೆ ಎಂದು ಸಮಾಜ ಸೇವಕ ಹೊಸರೋಡ್ ನಾಗೇಶ್ ಬೇಸರ ವ್ಯಕ್ತಪಡಿಸಿದರು.

ಸಂಯುಕ್ತ ಕರ್ನಾಟಕ



| Date16 | 16-11-2020 |
|---|---|
| Page No | 2 |



# ದೀಪಾವಳಿ ಸಂಭ್ರಮದಲ್ಲಿ ಕೊರೊನಾ ಭಯ ಮಾಯ

**ಸಂ.ಕ.ಸಮಾಚಾರ, ಬೆಂಗಳೂರು**

ದೀಪಾವಳಿ ಹಬ್ಬದ ಆಚರಣೆಯ ಸಂಭ್ರಮದಲ್ಲಿ ಜನರ ಕೊರೊನಾ ಆತಂಕ ಮಾಯವಾಗಿದ್ದು, ಸಾರ್ವಜನಿಕರು ಸಂಪೂರ್ಣವಾಗಿ ಮುನ್ನೆಚ್ಚರಿಕೆಗಳನ್ನು ಮರೆತು ಹಬ್ಬದ ಆಚರಣೆಯಲ್ಲಿ ಪಾಲ್ಗೊಂಡಿದ್ದಾರೆ. ನಗರದ ಎಲ್ಲ ಹೂ, ಹಣ್ಣು ತರಕಾರಿ ಮಾರುಕಟ್ಟೆಗಳಲ್ಲಿ ಸಾಮಾಜಿಕ ಅಂತರ, ಸ್ಯಾನಿಟೈಸೇಷನ್, ಕಡ್ಡಾಯ ಮುಖಗವಸು ಮುಂತಾದವುಗಳನ್ನು ಮರೆತು ಖರೀದಿಯ ಭರಾಟೆಯಲ್ಲಿ ಜನರು ಪಾಲ್ಗೊಂಡಿರುವುದರಿಂದಾಗಿ ಸೋಂಕು ಉಲ್ಬಣಿಸುವ ಸಾಧ್ಯತೆಗಳಿರುವುದರಿಂದ ಆತಂಕವೂ ಸಹ ಸೃಷ್ಟಿಯಾಗಿದೆ.

ಕಳೆದ ಎರಡು ತಿಂಗಳಲ್ಲಿ ಬಂದ ಗೌರಿ ಗಣೇಶ ಮತ್ತು ದಸರಾ ದೀಪಾವಳಿ ಹಬ್ಬದ ಸಮಯದಲ್ಲಿ ಸೋಂಕಿನ ಸಂಖ್ಯೆ ಹೆಚ್ಚಾಗಿದ್ದರಿಂದ ಜನರು ಹಬ್ಬದ ಕಡೆಗೆ ಅಷ್ಟಾಗಿ ಗಮನವನ್ನೇ ನೀಡಿರಲಿಲ್ಲ. ಜೊತೆಗೆ ಸರ್ಕಾರದ ಕೊರೊನಾ ನಿರ್ಬಂಧವೂ ಸಹ ಕಟ್ಟುನಿಟ್ಟಾಗಿ ಆಚರಿಸಲ್ಪಡುತ್ತಿತ್ತು. ಆದರೆ ಹಂತಹಂತವಾಗಿ ಲಾಕ್‌ಡೌನ್ ಸಡಲಿಕೆ, ಜನಜಂಗುಳಿಗಳ ಮೇಲೆ ಹೇರಿದ್ದ ಕಠಿಣ ನಿರ್ಬಂಧಗಳ ತೆರವು ಇವುಗಳು ಜನರ ಮನಸ್ಥಿತಿಯ ಮೇಲೆ ಅಗಾಧ ಪರಿಣಾಮವನ್ನುಂಟುಮಾಡಿದೆ. ಇಷ್ಟೇ ಅಲ್ಲದೇ ತಜ್ಞರ, ವೈದ್ಯರ ಎಚ್ಚರಿಕೆಯನ್ನು ಗಾಳಿಗೆ ತೂರಿದ ಜನರು ಪಟಾಕಿ ಖರೀದಿಯಲ್ಲೂ ಸಹ ತಮ್ಮನ್ನು ತೊಡಗಿಸಿಕೊಂಡಿರುವುದು ಇನ್ನಷ್ಟು ಆತಂಕಕ್ಕೆ ಎಡೆಮಾಡಿಕೊಟ್ಟಿದೆ.



- ಹೂಹಣ್ಣು, ಪಟಾಕಿ ಖರೀದಿಯಲ್ಲಿ ಪಾಲ್ಗೊಂಡ ಜನಸ್ತೋಮ
- ಕೊರೊನಾ ನಿರ್ಬಂಧಗಳನ್ನು ಗಾಳಿಗೆ ತೂರಿದ ಸಾರ್ವಜನಿಕರು
- ಜನರ ನಿರ್ಲಕ್ಷ್ಯದಿಂದಾಗಿ ಸೋಂಕು ಮತ್ತೆ ಉಲ್ಬಣಿಸುವ ಸಂಭವ

ಚಳಿಗಾಲದ ವಾತಾವರಣ ಮತ್ತು ಪಟಾಕಿಯ ಹೊಗೆ ಶ್ವಾಸ ಸಂಬಂಧಿ ತೊಂದರೆಗಳನ್ನು ಹೊಂದಿರುವ ಕೊರೊನಾ ಪೀಡಿತರಿಗೆ ಮಾರಣಾಂತಿಕವಾಗಿ ಪರಿಣಮಿಸಬಲ್ಲದು ಎಂಬ ವೈದ್ಯರ ಮುನ್ನೆಚ್ಚರಿಕೆಯನ್ನೂ ಮರೆತು ಹಬ್ಬದಲ್ಲಿ ಪಾಲ್ಗೊಂಡಿರುವ ಜನರಿಂದಾಗಿ ಪಟಾಕಿ ಎಲ್ಲೆಡೆ ಸದ್ದು ಮಾಡಲಾರಂಭಿಸಿದೆ.

ಹಬ್ಬದ ಎರಡನೇ ದಿನವಾದ ಭಾನುವಾರವಂತೂ ಕಚೇರಿ, ಕಾರ್ಖಾನೆಗಳು ರಜೆಯಿದ್ದ ಕಾರಣ ಕೆ.ಆರ್. ಮಾರುಕಟ್ಟೆಯಲ್ಲಿ ದಟ್ಟ ಜನಜಂಗುಳಿ ಉಂಟಾಗಿತ್ತು. ಮೊದಲೇ ಶುಚಿತ್ವಕ್ಕೆ ಸವಾಲೆಸೆಯುವ ಹೂಹಣ್ಣಿನ ಮಾರುಕಟ್ಟೆಯಲ್ಲಿ ಭಾನುವಾರ ಸುರಿದ ಜಿಟಿಜಿಟಿ ಅಕಾಲಿಕ ಮಳೆಯಿಂದಾಗಿ ಮಾರುಕಟ್ಟೆ ಸಂಪೂರ್ಣ ಕೊಚ್ಚೆಮಯವಾಗಿತ್ತು. ಆದರೆ ಇದಾವುದನ್ನೂ ಲೆಕ್ಕಿಸದ ಸಾರ್ವಜನಿಕರು ಉತ್ಸಾಹದಿಂದಲೇ ಖರೀದಿ ಭರಾಟೆಯಲ್ಲಿ ತೊಡಗಿಕೊಂಡಿದ್ದರು. ಅಲ್ಲಲ್ಲಿ ನಿಯೋಜಿಸಲಾಗಿದ್ದ ಪೊಲೀಸರು ಮತ್ತು ಮಾರ್ಷಲ್‌ಗಳ ಸಂಖ್ಯೆ ಈ ಜನಸ್ತೋಮದೆದುರು ಅಸಹಾಯಕರಾಗಿ ಕೈಕಟ್ಟಿ ನಿಲ್ಲಬೇಕಾಯ್ತು.

ಸಂಯುಕ್ತ ಕರ್ನಾಟಕ

| Date16 | 16-11-2020 |
|---|---|
| Page No | 2 |

# ಹಬ್ಬದ ರಾಶಿರಾಶಿ ಕಸ ಪಾಲಿಕೆಗೆ ತಲೆನೋವು

- ರಸ್ತೆಗಳಲ್ಲಿ ಮಾರಾಟವಾಗದ ಬಾಳೆಕಂದು
- ಭಾನುವಾರವೂ ಹಬ್ಬದ ವ್ಯಾಪಾರ
- ಸ್ವಚ್ಛತಾ ಕಾರ್ಯಗಳಿಗೆ ತೊಡಕು
- ಕಸ ತೆರವಿಗೆ ಇನ್ನೂ ಒಂದೆರಡು ದಿನ ಅಗತ್ಯ

**ಸಂ.ಕ. ಸಮಾಚಾರ ಬೆಂಗಳೂರು**

ಹಬ್ಬಗಳ ಸಾಲು ಬಂದರೆ ಬಿಬಿಎಂಪಿಗೆ ಕಸದ ಸಮಸ್ಯೆ ದೊಡ್ಡ ತಲೆನೋವಾಗಿ ಪರಿಣಮಿಸುತ್ತಿದೆ. ಹಬ್ಬದ ಸಂದರ್ಭದಲ್ಲಿ ನಗರದಲ್ಲಿ ಎಲ್ಲೆಲ್ಲೂ ಕಸದ ರಾಶಿ ಎದ್ದು ಕಾಣುತ್ತದೆ.

ದಸರಾ ಮುಗಿಯುತ್ತಿದ್ದಂತೆ ಹಿಂದೆಯೇ ದೀಪಾವಳಿ ಹಬ್ಬ ಬಂದು ಈಗ ಹಬ್ಬಕ್ಕಾಗಿ ಮಾರಾಟ ಮಾಡಲು ತಂದಿದ್ದ ಬಾಳೆಕಂದು, ಬೂದಗುಂಬಳ, ಹೂವು ಸೇರಿದಂತೆ ಇನ್ನಿತರ ವಸ್ತುಗಳ ಮಾರಾಟವಾಗದ ಹಿನ್ನೆಲೆಯಲ್ಲಿ ವ್ಯಾಪಾರಿಗಳು ಅವುಗಳನ್ನು ರಸ್ತೆ ಬದಿಯೇ ಬಿಟ್ಟುಹೋಗಿದ್ದಾರೆ. ಇದರಿಂದ ನಗರದ ಬಹುತೇಕ ಕಡೆ ಕಸದ ರಾಶಿ ಎದ್ದು ಕಾಣುತ್ತಿದೆ.

ಶುಕ್ರವಾರದಿಂದಲೇ ಹಬ್ಬಕ್ಕಾಗಿ ವ್ಯಾಪಾರದ ಭರಾಟೆ ಜೋರಾಗಿತ್ತು. ಇದಕ್ಕಾಗಿ ಕೆ.ಆರ್. ಮಾರುಕಟ್ಟೆ, ಯಶವಂತಪುರ, ಮಲ್ಲೇಶ್ವರ, ಮಡಿವಾಳ, ಬನಶಂಕರಿ, ಯಲಹಂಕ, ದಾಸರಹಳ್ಳಿ, ಕೆ.ಆರ್. ಪುರ, ಹೆಬ್ಬಾಳ, ಜಯನಗರ, ಮಾರತ್‌ಹಳ್ಳಿ, ವೈಟ್‌ಫೀಲ್ಡ್, ಹಲಸೂರು ಸೇರಿದಂತೆ ಬಹುತೇಕ ಕಡೆ ಹಬ್ಬಕ್ಕಾಗಿ ಬಾಳೆಕಂದು ಹಾಗೂ ಬೂದಗುಂಬಳದ ಮಾರಾಟಕ್ಕೆ ಪಾದಚಾರಿ ಮಾರ್ಗದಲ್ಲಿ ಇಡಲಾಗಿತ್ತು. ಶುಕ್ರವಾರದಿಂದ ಭಾನುವಾರದವರೆಗೆ ವ್ಯಾಪಾರ ನಡೆದರೂ ಹೆಚ್ಚಾಗಿ ತಂದಿದ್ದ ಬಾಳೆಕಂದು ಹಾಗೂ ಬೂದಕುಂಬಳ, ಹೂವು ಮಾರಾಟವಾಗದೆ ಇದ್ದ ಕಾರಣ ವ್ಯಾಪಾರಿಗಳು ಅಲ್ಲಿಯೇ ಬಿಟ್ಟುಹೋಗಿದ್ದಾರೆ. ಇದರಿಂದ ನಗರದ ಅನೇಕ ಪ್ರದೇಶಗಳಲ್ಲಿನ ಪಾದಚಾರಿ ಮಾರ್ಗ, ರಸ್ತೆ ಬದಿಯಲ್ಲಿ ಕಸದ ರಾಶಿ ಎದ್ದು ಕಾಣುತ್ತಿದೆ.




ಭಾನುವಾರದ ಜೊತೆಗೆ ದೀಪಾವಳಿ ಹಿನ್ನೆಲೆಯಲ್ಲಿ ಪೌರಕಾರ್ಮಿಕರು ಕೆಲಸಕ್ಕೆ ಹಾಜರಾಗಿದ್ದರೂ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಕೊಳ್ಳಲು ಆಗಲಿಲ್ಲ. ಮಾರುಕಟ್ಟೆ ಪ್ರದೇಶ ಮಾತ್ರವಲ್ಲದೆ ಕೆಲವು ವಸತಿ ಪ್ರದೇಶಗಳಲ್ಲೂ ಹಬ್ಬಕ್ಕೆ ಬೇಕಾದ ವಸ್ತುಗಳ ಮಾರಾಟ ನಡೆಯುತ್ತಿದ್ದರಿಂದ ಪೌರಕಾರ್ಮಿಕರು ವಾಪಸ್ಸಾಗಬೇಕಾಯಿತು. ಇನ್ನು ಸೋಮವಾರವೂ ಹಬ್ಬ ಇರುವುದರಿಂದ ಸ್ವಚ್ಛತಾ ಕಾರ್ಯ ಪೂರ್ಣ ಪ್ರಮಾಣದಲ್ಲಿ ನಡೆಯುವುದು ಕಷ್ಟ. ಒಂದು ವೇಳೆ ಸ್ವಚ್ಛತಾ ಕಾರ್ಯ ನಡೆದರೂ ಅದನ್ನು ವಿಲೇವಾರಿ ಮಾಡುವುದು ಮತ್ತಷ್ಟು ಸಮಸ್ಯೆ ಎದುರಾಗಲಿದೆ. ಈಗಾಗಲೇ ಕಸದ ರಾಶಿ ಬಿದ್ದಿರುವುದರಿಂದ ಅದನ್ನು ತೆರವು ಮಾಡಲು ಒಂದೆರಡು ದಿನ ಬೇಕಾಗುತ್ತದೆ.

ಕೃಷ್ಣರಾಜ ಮಾರುಕಟ್ಟೆ ಯಲ್ಲಿ ಜನಜಂಗುಳಿ | ಹಬ್ಬದ ಸಡಗರ | ಹೂವು, ಹಣ್ಣು, ಬಾಳೆ ಕಂದು, ಪಟಾಕಿ ಖರೀದಿ ಜೋರು

# ಕೊರೋನಾ ನಡುವೆಯೂ ದೀಪಾವಳಿ ಸಂಭ್ರಮ

**ಬೆಂಗಳೂರು:** ಮಳೆ, ಕೊರೋನಾ ಸೋಂಕಿನ ನಡುವೆಯೂ ನಗರದಲ್ಲಿ ದೀಪಾವಳಿ ಹಬ್ಬದ ಸಂಭ್ರಮ, ಸಡಗರ ಕಳೆ ಕಟ್ಟಿದೆ. ನರಕ ಚತುರ್ದಶಿ, ಅಮವಾಸ್ಯೆ ಹಾಗೂ ಬಲಿ ಪಾಡ್ಯಮಿ ಹಬ್ಬದ ಹಿನ್ನೆಲೆಯಲ್ಲಿ ಬೆಂಗಳೂರಿನ ಕೃಷ್ಣರಾಜ ಮಾರುಕಟ್ಟೆ ಸೇರಿದಂತೆ ಹಲವು ಪ್ರಮುಖ ಸ್ಥಳಗಳಲ್ಲಿ ಕಳೆದ ಎರಡು ಮೂರು ದಿನದಿಂದ ಜನಜಂಗುಳಿ ವಿಪರೀತವೆನ್ನುವಂತಾಗಿದೆ.

ಸದ್ಯ ರಾಜ್ಯ ಮತ್ತು ರಾಜಧಾನಿಯಲ್ಲಿ ಕೋವಿಡ್ ಸಾಂಕ್ರಾಮಿಕದ ಅಬ್ಬರ ಗಣನೀಯವಾಗಿ ಕಡಿಮೆಯಾಗುತ್ತಿದೆ. ಇದಕ್ಕಾಗಿ ಸರ್ಕಾರ ಮತ್ತು ಅಧಿಕಾರಿಗಳು ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತಿದ್ದಾರೆ. ಆದರೆ ಜನ ಸಾಮಾಜಿಕ ಅಂತರ ಮರೆತು, ಸೂಕ್ತ ಮುನ್ನೆಚ್ಚರಿಕಾ ಕ್ರಮ ತೆಗೆದುಕೊಳ್ಳದೆ ಹಬ್ಬದ ಸಂಭ್ರಮಾಚರಣೆಯಲ್ಲಿ ಮುಳುಗಿದ್ದಾರೆ. ಹಬ್ಬಕ್ಕೆ ಅಗತ್ಯವಿರುವ ಹೂವು, ಹಣ್ಣು, ಬಾಳೆ ಕಂದು, ಪಟಾಕಿ, ತರಕಾರಿ ಇತ್ಯಾದಿ ಖರೀದಿಸಲು ಬೀದಿಗಿಳಿದಿದ್ದಾರೆ. ಕಳೆದ 6 ತಿಂಗಳಿಂದ ಕಾದಿದ್ದವರು ಈಗ ಮಾರುಕಟ್ಟೆ, ಶಾಪಿಂಗ್ ಕಾಂಪ್ಲೆಕ್ಸ್, ಅಂಗಡಿ ಮಳಿಗೆಗಳಿಗೆ ಎಡತಾಕುತ್ತಿದ್ದು, ಹೊಸ ಬಟ್ಟೆ, ಆಭರಣ, ಇತ್ಯಾದಿಗಳನ್ನು ಕೊಂಡು ತೊಡಲಾರಂಭಿಸಿದ್ದಾರೆ. ಜನಸಾಮಾನ್ಯರ ಈ ನಿರ್ಲಕ್ಷ್ಯ ಅಧಿಕಾರಿಗಳ ನಿದ್ದೆಗೆಡಿಸಿದೆ. ಸಾಂಕ್ರಾಮಿಕ ರೋಗಕ್ಕೂ ತಮಗೂ ಸಂಬಂಧವೇ ಇಲ್ಲವೆಂಬಂತೆ ಸಡಗರದ ದೀಪಾವಳಿ ನಡೆಸುತ್ತಿರುವುದನ್ನು ನೋಡಿದರೆ ಕೊರೋನಾ ವೈರಸ್ ಕೂಡ ಹೆದರುತ್ತದೆಯೂ ಎನ್ನುವಂತಿದೆ.



ಚಿತ್ರಗಳು: ಮೋಹನ್ ಕುಮಾರ್ ಬಿ.ಎನ್.



## ಮೂಕ ಪ್ರಾಣಿಗಳ ಜೀವಕ್ಕೆ ಕೊಳ್ಳಿ

ಪೂಜೆಯ ತ್ಯಾಜ್ಯವಾದ ಹಸಿ ಕಸದ ಜೊತೆಯಲ್ಲಿ ಅದನ್ನು ಕಟ್ಟಿಕೊಂಡು ತಂದ ಪ್ಲಾಸ್ಟಿಕ್ ಕೂಡ ಬೆರೆತಿದೆ. ಮತ್ತೊಂದೆಡೆ ಜನ ಸಿಡಿಸಿದ ಪಟಾಕಿ ತ್ಯಾಜ್ಯ ಕಸದ ರಾಶಿಗೆ ಸೇರುತ್ತಿದೆ. ಹಸಿ ಕಸ, ಅದರೊಂದಿಗಿರುವ ಆಹಾರ ಪದಾರ್ಥ ತಿನ್ನುವ ದನ, ನಾಯಿಗಳ ಹೊಟ್ಟೆಗೆ ಹಲವು ವಿಷಕಾರಿ ಅಂಶ ಸೇರುತ್ತಿವೆ. ಪಟಾಕಿ ಸಿಡಿಸುವುದರಿಂದ ವಾಯು, ಶಬ್ದ ಮತ್ತು ಪರಿಸರ ಮಾಲಿನ್ಯವಾಗುತ್ತದೆ ಎಂದು ಸರ್ಕಾರ ಎಷ್ಟೇ ಎಚ್ಚರಿಕೆ ನೀಡಿದರೂ, ಜನ ತಾವೇ ಎಚ್ಚೆತ್ತುಕೊಂಡು ಸ್ವಯಂ ನಿಯಂತ್ರಣ ಹೇರಿಕೊಳ್ಳದಿದ್ದರೆ ಹಬ್ಬದ ಸಡಗರ ಸಾವಿರಾರು ಮೂಕ ಜೀವ ಜಂತುಗಳ ಪ್ರಾಣಕ್ಕೆ ಎರವಾದೀತು. ಇದನ್ನು ಪ್ರಜ್ಞಾವಂತ, ವಿದ್ಯಾವಂತರಿಗೆ ವಿವರಿಸುವವರು ಯಾರು ಎನ್ನುವುದು ಮಿಲಿಯನ್ ಡಾಲರ್ ಪ್ರಶ್ನೆ!

## ಹೆಚ್ಚಿದೆ ಕಸದ ರಾಶಿ!

ಹೂವು, ಹಣ್ಣು, ಬಾಳೆ ಕಂದಿಲು, ಕಬ್ಬು, ಪಟಾಕಿಗಳ ಪೊಟ್ಟಣ, ಹೀಗೆ ದಂಡಿಗಟ್ಟಲೆ ಕಸದ ರಾಶಿ ನಗರದ ಹಲವು ರಸ್ತೆಗಳನ್ನಾವರಿಸಿದೆ. ಹಬ್ಬದ ಹಿನ್ನೆಲೆಯಲ್ಲಿ ತಂದಿದ್ದ ಲಕ್ಷಾಂತರ ಟನ್ ಮೌಲ್ಯದ ವಸ್ತುಗಳು ಈಗ ಪೂಜೆ ಮುಗಿದ ಬಳಿಕ ಬೀದಿಯಲ್ಲಿ ಬೆಟ್ಟದಾಕಾರದಲ್ಲಿ ಬಿದ್ದಿದೆ. ಇದರಿಂದ ಕೃಷ್ಣರಾಜ ಮಾರುಕಟ್ಟೆ, ಯಶವಂತಪುರ, ರಸೆಲ್ ಮಾರುಕಟ್ಟೆ ಮೊದಲಾದ ಕಡೆಗಳಲ್ಲಿ ಜನರ ಓಡಾಟ ಮತ್ತು ವಾಹನ ಸಂಚಾರ ಅಸ್ತವ್ಯಸ್ತಕ್ಕೂ ಎಡೆಮಾಡಿಕೊಟ್ಟಿದೆ. ರಸ್ತೆ ಯಾವುದು? ಕಸ ಹಾಕುವ ಜಾಗ ಯಾವುದು ಎನ್ನುವುದೇ ಅರಿವಾಗದಷ್ಟು ರಾಶಿ ಎಲ್ಲೆಂದರಲ್ಲಿ ಬಿದ್ದಿದೆ. ಜನರ ಇಂಥ ವರ್ತನೆ ನಿತ್ಯ ನಗರದ ಸುರಕ್ಷತೆ ನೋಡಿಕೊಳ್ಳುವ ಪೌರಕಾರ್ಮಿಕರಿಗೂ ದೊಡ್ಡ ತಲೆನೋವಾಗಿ ಪರಿಣಮಿಸಿದೆ.



ಜನದನಿಯ ಸಾರಥಿ
ವಾರ್ತಾ ಭಾರತಿ

| Date | 16-11-2020 |
| --- | --- |
| Page No | 8 |

# ರಾಜ್ಯದಲ್ಲಿ ಬಗೆಹರಿಯದ ತ್ಯಾಜ್ಯ ವಿಲೇವಾರಿ

ಬೆಂಗಳೂರು, ನ. 15: ರಾಜ್ಯದಲ್ಲಿ ತ್ಯಾಜ್ಯ ವಿಲೇವಾರಿ ಮತ್ತು ಸಂಸ್ಕರಣೆಯು ಹಲವು ವರ್ಷಗಳ ಸಮಸ್ಯೆಯಾಗಿ ಉಳಿದಿದ್ದು, ತ್ಯಾಜ್ಯ ವಿಲೇವಾರಿ ಮತ್ತು ಸಂಸ್ಕರಣೆಯನ್ನು ರಾಜ್ಯ ಸರಕಾರ ಬರೀ ತಾತ್ಕಾಲಿಕ ನೆಲೆಯಲ್ಲಿ ಬಗೆಹರಿಸುತ್ತಿದ್ದೇವೆಯೇ ಹೊರತು ಶಾಶ್ವತವಾಗಿ ಪರಿಹಾರ ನೀಡಲು ಸಾಧ್ಯವಾಗುತ್ತಿಲ್ಲ.

ಅಲ್ಲದೆ, ಹಸಿ ಕಸ, ಒಣ ಕಸವನ್ನು ವಿಂಗಡಿಸಿ ಹಸಿ ತ್ಯಾಜ್ಯದಿಂದ ಸಿಎನ್‌ಜಿ ಇಂಧನ, ಒಣ ತ್ಯಾಜ್ಯದಿಂದ ವಿದ್ಯುತ್ ಉತ್ಪಾದಿಸಬಹುದು. ಆದರೆ, ಸರಕಾರ ಮಾತ್ರ ಈ ವಿಚಾರದಲ್ಲಿ ಆಸಕ್ತಿ ತೋರಿಸುತ್ತಿಲ್ಲ.

ರಾಜಧಾನಿಯಲ್ಲಿ ಕಸದಿಂದ ವಿದ್ಯುತ್ ತಯಾರಿಕಾ ಘಟಕದ ಆರಂಭಕ್ಕೆ ಬಿಬಿಎಂಪಿ ಮೀನಾಮೇಷ ಎಣಿಸುತ್ತಿದ್ದು, ಆರು ಸಂಸ್ಥೆಗಳ ಜೊತೆ ಮಾತುಕತೆ ನಡೆದಿದ್ದರೂ ಇನ್ನೂ ಒಂದು ಸಂಸ್ಥೆಯೂ ಕಾರ್ಯಾರಂಭಗೊಳಿಸಿಲ್ಲ. ನಗರದಲ್ಲಿ ಪ್ರತಿನಿತ್ಯ 4,500 ಮೆಟ್ರಿಕ್ ಟನ್ ಕಸ ಉತ್ಪತ್ತಿಯಾಗುತ್ತಿದ್ದು, ಗೊಬ್ಬರ ತಯಾರಿಕೆ ಹೊರತುಪಡಿಸಿ ಬೇರೆ ಯಾವುದೇ ರೀತಿಯಲ್ಲಿ ಕಸ ಮರುಬಳಕೆ ಆಗುತ್ತಿಲ್ಲ.

ನೂರಾರು ಟನ್ ತ್ಯಾಜ್ಯ ಸಂಗ್ರಹಿಸಿ ಗೊಬ್ಬರ ತಯಾರಿಸಿ ಗಮನ ಸೆಳೆದಿದ್ದ

## ಸಂಸ್ಕರಣಾ ಘಟಕ ಸಮಸ್ಯೆ



ಬೆಳಗಾವಿ ಮಹಾನಗರ ಪಾಲಿಕೆಯು, ಇದೀಗ ವಿದ್ಯುತ್ ತಯಾರಿಕೆಗೂ ಮುಂದಾಗಿದೆ. ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ನಿರ್ದೇಶನದ ಹಿನ್ನೆಲೆ, ಬೆಳಗಾವಿ ಮಹಾನಗರ ಪಾಲಿಕೆ ಬಯೋ ಮಿಥನಾಜೈಶನ್ ಮೂಲಕ ತ್ಯಾಜ್ಯದಿಂದ ವಿದ್ಯುತ್ ತಯಾರಿಕೆಗೆ ಯೋಜನೆ ಹಾಕಿಕೊಂಡಿದೆ.

ಬೆಳಗಾವಿ ಮಹಾನಗರದಲ್ಲಿ ನಿತ್ಯ 120 ಟನ್ ತ್ಯಾಜ್ಯ ಸಂಗ್ರಹವಾಗುತ್ತದೆ. ಈ ಕಸವನ್ನು ಬೆಳಗಾವಿ ತಾಲೂಕಿನ ತುರುಮುರಿ ಗ್ರಾಮದಲ್ಲಿರುವ ಗೊಬ್ಬರ ತಯಾರಿಕಾ ಘಟಕಕ್ಕೆ ಡಂಪ್ ಮಾಡಲಾಗುತ್ತದೆ. ತ್ಯಾಜ್ಯದ ಸಹಾಯದಿಂದ ಗೊಬ್ಬರ ತಯಾರಿಸಲಾಗುತ್ತದೆ. ಇದೀಗ ಇದೇ ಕಸದಿಂದ ವಿದ್ಯುತ್ ತಯಾರಿಸಲು ಪಾಲಿಕೆ ಮುಂದಾಗಿದೆ.

ಮಂಗಳೂರಿನಲ್ಲಿ ಪ್ರತಿದಿನ 300 ಟನ್ ಕಸ ಸಂಗ್ರಹವಾಗುತ್ತಿದ್ದು, ಈಗಾಗಲೇ 5 ಲಕ್ಷ ಟನ್ ಕಸ ಸಂಗ್ರಹವಿದೆ. ಆದ್ದರಿಂದ ಕಸದಿಂದ ವಿದ್ಯುತ್ ಉತ್ಪಾದಿಸುವ ಘಟಕ ರೂಪಿಸಲು ಮಂಗಳೂರು ಪಾಲಿಕೆ ಚಿಂತನೆ ನಡೆಸಿದೆ.

ಇನ್ನು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯು, ಒಣತ್ಯಾಜ್ಯದಿಂದ ಇಂಧನ ತಯಾರಿಸುವ ಬಗ್ಗೆ ನಿರ್ಧಾರ ಮಾಡಿದೆ. ದಿನನಿತ್ಯ ಉತ್ಪತ್ತಿಯಾಗುವ ಸುಮಾರು 200 ಟನ್ ಒಣತ್ಯಾಜ್ಯದಿಂದ ಇಂಧನ ತಯಾರಿಸುವ ಕುರಿತಂತೆ ಎನ್‌ವಿವಿಎನ್ ಜೊತೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

'ಕಸದಿಂದ ಇಂಧನ' ಉತ್ಪಾದನೆ ಮಾಡುವುದರಿಂದ ನಗರಗಳಲ್ಲಿನ ಒಣತ್ಯಾಜ್ಯವು, ವೈಜ್ಞಾನಿಕವಾಗಿ ಪರಿಸರಕ್ಕೆ ಮಾರಕವಾಗದಂತೆ ವಿಲೇವಾರಿಯಾಗಲು ಅನುಕೂಲವಾಗುತ್ತದೆ. ಇದರಿಂದ ವಾಯುಮಾಲಿನ್ಯವು ಕಡಿಮೆಯಾಗಲಿದ್ದು, ಸ್ವಚ್ಛ ಪರಿಸರ ನಿರ್ಮಾಣವಾಗಲಿದೆ.

| Date | 15-11-2020 |
| --- | --- |
| Page No | 6 |




ಬಿಬಿಎಂಪಿ ವತಿಯಿಂದ ಗೋವಿಂದರಾಜ ನಗರದ ಮಹಿಳೆಯರಿಗೆ ವಸತಿ ಸಚಿವ ಉಚಿತ ಹೊಲಿಗೆ ಯಂತ್ರ ವಿತರಿಸಿದರು. ಮಾಜಿ ಮೇಯರ್ ಶಾಂತಾಕುಮಾರಿ ವಿಶ್ವನಾಥಗೌಡ ಇದ್ದರು.

ಈ ಸಂಜೆ

| Date | 15-11-2020 |
| --- | --- |
| Page No | 3 |

## ಅಮಾವಾಸ್ಯೆ, ದೀಪಾವಳಿ ಹಬ್ಬದಲ್ಲಿ ಮೈ ಮರೆತ ಜನ

# ಕೊರೊನಾ ಹೆಚ್ಚಾಗುವ ಆತಂಕ

**ಬೆಂಗಳೂರು,ನ.15-** ದೀಪಾವಳಿ ಹಬ್ಬವು ಜನರ ಬದುಕಿನಲ್ಲಿ ಬೆಳಕು ಮೂಡಿಸುವ ಬದಲು ಕೊರೊನಾ ಹೆಚ್ಚಿಸುವ ಭೀತಿ ಉಂಟು ಮಾಡಿದೆ.

ಸಿಲಿಕಾನ್ ಸಿಟಿ ಮಂದಿ ಕೊರೊನಾ ಸೋಂಕು ಹರಡುವ ಭೀತಿಯನ್ನು ಮರೆತು ಹಬ್ಬಕ್ಕಾಗಿ ಹೂ, ಹಣ್ಣು ಇತರೆ ಬೇಕಾದ ವಸ್ತುಗಳನ್ನು ಖರೀದಿಸುವ ಭರಾಟೆಯಲ್ಲಿ ತೊಡಗಿದ್ದಾರೆ. ಈಗ ದೀಪಾವಳಿ ಹಾಗೂ ಅಮಾವಾಸ್ಯೆ ಹಿನ್ನೆಲೆಯಲ್ಲಿ ಭಕ್ತರು ಯಾವುದೇ ಮುಂಜಾಗ್ರತೆ ವಹಿಸದೆ ಅಣ್ಣಮ್ಮ ದೇವಿಯ ದೇವಸ್ಥಾನಕ್ಕೆ ಬಂದಿದ್ದರು.

ಬೆಳಗಿನ ಜಾವದಿಂದಲೇ ಆರಂಭವಾದ ಪೂಜಾ ಕಾರ್ಯಕ್ರಮದಲ್ಲಿ ಕೆಲವು ಪೋಷಕರು ತಮ್ಮ ಪುಟ್ಟ ಕಂದಮ್ಮಗಳನ್ನು ಕರೆದುತಂದಿರುವ ದೃಶ್ಯಗಳು ಕಂಡುಬಂದವು. ಭಕ್ತರು ಸಾಮಾಜಿಕ ಅಂತರ ಮರೆತು ದೇಗುಲದಲ್ಲಿ ನಡೆದ ಪೂಜೆಗಳಲ್ಲಿ ಪಾಲ್ಗೊಂಡಿರುವುದು ಕೊರೊನಾ ಹೆಚ್ಚಾಗುವ ಭೀತಿ ಉಂಟಾಗಿದೆ.

ದೇಗುಲ ಪ್ರವೇಶಿಸುವ ಭಕ್ತರು ಕಡ್ಡಾಯವಾಗಿ ಮಾಸ್ಕ್ ಧರಿಸಬೇಕೆಂದು ಸೂಚಿಸಿದ್ದರೂ ಕೂಡ ಕೆಲವು ಭಕ್ತರು ಮಾಸ್ಕ್ ಧರಿಸದೇ ಬಂದಿದ್ದರು, ಇನ್ನು ಕೆಲವರು ಅರ್ಧಂಬರ್ಧ ಮಾಸ್ಕ್ ಹಾಕಿಕೊಂಡಿದ್ದರೆ, ಕುಟುಂಬ ಸಮೇತರಾಗಿ ಬಂದಿದ್ದ ಭಕ್ತರು ಮಕ್ಕಳಿಗೆ ಮಾತ್ರ ಮಾಸ್ಕ್‌ಗಳನ್ನು ಹಾಕಿ ತಾವು ಮಾಸ್ಕ್ ಧರಿಸದೆ ದೇವಸ್ಥಾನ ಮಂಡಳಿ ವಿಧಿಸಿದ ಕೊರೊನಾ ನಿಯಮಗಳನ್ನು ಗಾಳಿಗೆ ತೂರಿದ್ದಾರೆ.

**ಬಿಕೋ ಎನ್ನುತ್ತಿದ್ದ ದೇಗುಲಗಳು:**

ಹಬ್ಬ ಹರಿದಿನಗಳು ಬಂದರೆ ದೇಗುಲದಲ್ಲಿ ಭಕ್ತರ ದಂಡೇ ನೆರೆಯುತ್ತದೆ. ಆದರೆ ಈ ಬಾರಿ ಕೊರೊನಾದ ಭೀತಿಯಲ್ಲಿ ಸಿಲಿಕಾನ್ ಸಿಟಿಯಲ್ಲಿ ಕೆಲವು ದೇಗುಲಗಳು ಭಕ್ತರಿಲ್ಲದೆ ಬಿಕೋ ಎನ್ನುತ್ತಿದ್ದವು.

ಮಲ್ಲೇಶ್ವರಂನಲ್ಲಿರುವ ಹಲವು ದೇಗುಲಗಳು ಖಾಲಿ ಖಾಲಿಯಾಗಿದ್ದರೆ, ಸರ್ಕಲ್ ಮಾರಮ್ಮ, ಲಕ್ಷ್ಮೀ ನರಸಿಂಹ ದಕ್ಷಿಣ ಮುಖ ನಂದಿ, ಗಂಗಮ್ಮ ದೇಗುಲಗಳಲ್ಲಿ ಕೆಲವೇ ಕೆಲವು ಭಕ್ತರು ದೇವರ ದರ್ಶನ ಪಡೆದರು.

ಇನ್ನು ಪ್ರತಿ ವರ್ಷ ಭಕ್ತರ ದಂಡೇ ನೆರೆಯುತ್ತಿದ್ದ ಬಂಡೆ ಮಂಕಾಳಿ ದೇಗುಲದಲ್ಲೂ ಭಕ್ತರ ಸಂಖ್ಯೆ ವಿರಳವಾಗಿದ್ದರೆ ಕೆಲವು ದೇಗುಲಗಳಲ್ಲಿ ಭಕ್ತರು ಕೊರೊನಾ ನಿಯಮಗಳನ್ನು ಗಾಳಿಗೆ ತೂರಿ ದೇವರ ದರ್ಶನ ಪಡೆದಿದ್ದಾರೆ.

ಒಟ್ಟಾರೆ ದೀಪಾವಳಿ ಹಬ್ಬ ಹಾಗೂ ಅಮಾವಾಸ್ಯೆ ಪೂಜೆಗಳಲ್ಲಿ ಭಕ್ತರು ಕೊರೊನಾ ಭೀತಿ ಮರೆತು ಪಾಲ್ಗೊಂಡಿರುವುದರಿಂದ ಸಿಲಿಕಾನ್ ಸಿಟಿಯಲ್ಲಿ ಮಹಾಮಾರಿಯ ಆರ್ಭಟ ಹೆಚ್ಚಾಗುತ್ತದೆಯೇ ಎಂಬ ಭೀತಿ ಜನರಲ್ಲಿ ಆವರಿಸಿದೆ.

ಈ ಸಂಜೆ

| | |
|---|---|
| Date | 15-11-2020 |
| Page No | 7 |

# ಪರಿಸರ ಸಂರಕ್ಷಣೆಯಲ್ಲಿ ಪೌರಕಾರ್ಮಿಕರ ಪಾತ್ರ ಹಿರಿದು



**ಬೆಂಗಳೂರು, ನ.15-** ಪರಿಸರಕ್ಕೆ ಮಾರಕವಾಗಿರುವ ಹಾನಿಕಾರಕ ಪ್ಲಾಸ್ಟಿಕ್ ಸೇರಿದಂತೆ ತ್ಯಾಜ್ಯವನ್ನು ಸಂಗ್ರಹಿಸುವಲ್ಲಿ ಪೌರಕಾರ್ಮಿಕರ ಪಾತ್ರ ಮಹತ್ವದ್ದಾಗಿದೆ ಎಂದು ಬಿಜೆಪಿ ಯುವ ಮುಖಂಡ ಹಾಗೂ ಬಿ.ಪ್ಯಾಕ್ ಸಿವಿಕ್ ಲೀಡರ್ ಅವಿನ್ ಆರಾಧ್ಯ ತಿಳಿಸಿದ್ದಾರೆ.

ದೀಪಾವಳಿ ಪ್ರಯುಕ್ತ ಬಿ.ಪ್ಯಾಕ್ ಸಂಸ್ಥೆ ವತಿಯಿಂದ ಶಂಕರಮಠ ವಾರ್ಡ್ ನಲ್ಲಿ ಪೌರಕಾರ್ಮಿಕರಿಗೆ ಸಿಹಿ ವಿತರಿಸಿ ಮಾತನಾಡಿದ ಅವರು, ಕೊರೊನಾ ಸಂಕಷ್ಟದಲ್ಲೂ ಕರ್ತವ್ಯದಿಂದ ವಿಮುಖರಾಗದೆ ಪೌರಕಾರ್ಮಿಕರು ಸ್ವಚ್ಛತಾ ಕಾರ್ಯದಲ್ಲಿ ತೊಡಗಿಸಿಕೊಂಡು ಸಮಾಜ ಹಾಗೂ ನಾಗರಿಕರ ಆರೋಗ್ಯ ರಕ್ಷಣೆಯನ್ನು ಮಾಡುತ್ತಿದ್ದಾರೆ. ಜತೆಗೆ ಮಾಲಿನ್ಯ ಉಂಟು ಮಾಡುವ ತ್ಯಾಜ್ಯವನ್ನು ಸಂಗ್ರಹಿಸಿ ಪರಿಸರ ರಕ್ಷಣೆಯ ಗುರುತರ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ. ಇದನ್ನು ಮನಗಂಡು ಸ್ವಸ್ಥ ಸಮಾಜ ನಿರ್ಮಾಣದಲ್ಲಿ ಮುಂಚೂಣಿಯಲ್ಲಿರುವ ಬಿ.ಪ್ಯಾಕ್ ಸಂಸ್ಥೆಯಿಂದ ಕೊರೊನಾ ವಾರಿಯರ್ಸ್ ಗಳಿಗೆ ಸಿಹಿ ವಿತರಿಸಿ ಅಭಿನಂದಿಸಲಾಯಿತು ಎಂದರು.

ಸಚಿವ ಕೆ.ಗೋಪಾಲಯ್ಯ ಅವರ ಸಹಕಾರದೊಂದಿಗೆ ಸರಕಾರ ಹಾಗೂ ಪಾಲಿಕೆಯಿಂದ ಪೌರಕಾರ್ಮಿಕರಿಗೆ ಸಿಗಬೇಕಾದ ಸೌಲಭ್ಯ ಸವಲತ್ತುಗಳನ್ನು ಕೊಡಿಸಲು ಪ್ರಾಮಾಣಿಕವಾಗಿ ಶ್ರಮಿಸುವುದಾಗಿ ಇದೇ ವೇಳೆ ಅವರು ಭರವಸೆ ನೀಡಿದರು.

ಬಿಜೆಪಿ ಯುವ ಮುಖಂಡ ಹಾಗೂ ಬಿ ಪ್ಯಾಕ್ ಸಿವಿಕ್ ಲೀಡರ್ ರಾಘವೇಂದ್ರ, ಎಂ. ನಾಗರಾಜು ಮಾತನಾಡಿ, ಹೊರಗೆ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಕೊಳ್ಳುವ ಪೌರ ಕಾರ್ಮಿಕರಿಗೆ ಸೋಂಕು ತಗುಲುವ ಸಾಧ್ಯತೆ ಹೆಚ್ಚಾಗಿದ್ದು, ವೈಯಕ್ತಿಕ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು. ಕೆಲಸ ನಿರ್ವಹಿಸುವಾಗ ಕಡ್ಡಾಯವಾಗಿ ಮಾಸ್ಕ್ ಧರಿಸಿ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಎಂದು ತಿಳಿಸಿದರು.

ಸಿವಿಕ್ ಲೀಡರ್‌ಗಳಾದ ನಿಸರ್ಗ ಜಗದೀಶ್, ಚಂದ್ರಕಲಾ ಜಗದೀಶ್, ಪಾಲಿಕೆ ಅಧಿಕಾರಿಗಳು ಹಾಜರಿದ್ದರು.